
ಜನಪದ ವಿಚಾರ

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೬ ಅಕ್ಟೋಬರ್-೨೦೦೫ ಸಂಚಿಕೆ-೩



ಗಾಂಧೀ:

ವಿಶಿಷ್ಟ ಜೀವನ ಶೈಲಿಯ ಸಂಕೇತ

ಜನಪದ ವಿಚಾರದಲ್ಲಿ

ಗಾಂಧೀ ತಮ್ಮ ಜೀವಿತದ ೭೯ ವರ್ಷಗಳ ಕಾಲ ಮಾತು ಮತ್ತು ಕೃತಿಯ ಅನ್ಯೋನ್ಯತೆಯ ಮೂಲಕ ವಿಶಷ್ಠ ಜೀವನ ಶೈಲಿಯನ್ನು ವಿಶ್ವದ ಮುಂದೆ ತೆರೆದಿಟ್ಟದ್ದರು. ಪ್ರಪಂಚದ ಇಂದಿನ ವಿಚಾರವಂತರು ಗಾಂಧೀ ಪ್ರತಿಪಾದಿಸಿದ್ದ ಜೀವನ ಶೈಲಿ ಅನುಕರಣೀಯ ಮತ್ತು ಆದರ್ಶನೀಯ ಎಂದು ಹೇಳುತ್ತಿದ್ದಾರೆ. ಆದರೆ ವಿಶ್ವ ತದ್ವಿರುದ್ಧವಾಗಿ ಹೋಗುತ್ತಿದೆ. ಈ ಕುರಿತಾದ ವಿಚಾರಗಳ ಲೇಖನವಿದು.

ಅತ್ಯಾಧುನಿಕ ಎಂದು ಕರೆಸಿಕೊಳ್ಳುವ ಶಿಕ್ಷಣ ಪದ್ಧತಿ ಗಾಂಧೀ ಪ್ರತಿಪಾದಿಸಿದ್ದ ಜೀವನ ಶಿಕ್ಷಣ ವಿಚಾರವನ್ನು ಎದುರಿಸದೆ ತಲೆಮರೆಸಿಕೊಳ್ಳುತ್ತಿದೆ. ಅಂಥ ಮೂಲಭೂತ ವಿಚಾರಗಳನ್ನು ಶಿಕ್ಷಣದ ಬಗ್ಗೆ ಗಾಂಧೀ ಹೊಂದಿದ್ದರು ಎಂಬುದನ್ನು ಈ ಲೇಖನ ತೋರಿಸುತ್ತದೆ.

ಬಾಪುವಿನೊಡನೆ ಲೇಖಕರು ಎರಡು ದಿನ ಕಳೆದದ್ದು ಹೊರಗಲ್ಲ. ಗಾಂಧೀ ವಾಸಿಸುತ್ತಿದ್ದ ಕೋಣೆಯಒಳಗೇ! ಆಗ ಗಾಂಧೀಯನ್ನು ತೀರ ಹತ್ತಿರದಿಂದ ನೋಡಿದ ಅನುಭವಗಳು ಈ ಲೇಖನದಲ್ಲಿವೆ.

ಸದ್ವಿಚಾರಗಳ ಚಲನೆಗೆ ಭೌಗೋಳಿಕ ದೂರಾಗಲಿ, ಇಟ್ಟಿಗೆ, ಕಲ್ಲುಗಳ ಗೋಡೆಗಳಾಗಲಿ ಅಡ್ಡ ಬರುವುದಿಲ್ಲ ಎಂಬುದಕ್ಕೆ ಈ ಲೇಖನದಲ್ಲಿಯ ವಿಚಾರಗಳು ಸಿದ್ಧಪಡಿಸುತ್ತವೆ.

ಯಾವ ಅಮೇರಿಕಾ ದೇಶದ ನೀತಿಯಿಂದ ಪ್ರಪಂಚದಲ್ಲಿ ಯುದ್ಧಗಳ ಸರಣಿ ಉಂಟಾಗುತ್ತಿದಿಯೊ ಅದೇ ದೇಶದ ಓರ್ವ ಸಾಮಾನ್ಯ ಮಹಿಳೆ ಗಾಂಧೀ ವಿಚಾರದಿಂದ ಪ್ರೇರಿತಳಾಗಿ ಬಲಿಷ್ಠ ಪ್ರಭುತ್ವದ ವಿರುದ್ಧ ಸೆಟೆದು ನಿಂತಿರುವ ತಾಜಾ ಉದಾಹರಣೆ ಈ ಲೇಖನದಲ್ಲಿದೆ.

ಸಾಹಿತ್ಯ ಮತ್ತು ಲಲಿತಕಲೆಗಳ ಉದ್ದೇಶದ ಬಗ್ಗೆ ಅನೇಕ ಅಭಿಪ್ರಾಯಗಳಿವೆ. ಆದರೆ ಗಾಂಧೀಜಿಯವರ ಅಭಿಪ್ರಾಯದಲ್ಲಿ ಇವೆಲ್ಲವು ಅಂತರಂಗದ ಶುದ್ಧಿಗಾಗಿ ಈ ವಿಚಾರವನ್ನು ಪುಷ್ಠಿಕರಿಸುವ ಅನೇಕ ಮಾತುಗಳು ಈ ಲೇಖನದಲ್ಲಿವೆ. ಈ ಲೇಖನದ ಲೇಖಕರು ತತ್ವಶಾಸ್ತ್ರದ ವಿದ್ವಾಂಸರಾಗಿದ್ದರು.

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಅಕ್ಟೋಬರ್-೨೦೦೫

ಸಂಪುಟ-೬

ಸಂಚಿಕೆ-೩

ಸಂಪಾದಕ

ಸುರೇಂದ್ರ ಕೌಲಗಿ

ಸಲಹಾ ಸಮಿತಿ

ಜನಪದ ಸೇವಾ ಟ್ರಸ್ಟ್

ಧರ್ಮದರ್ಶಿ ಮಂಡಳಿ

ಚಂದಾ ವಿವರ

ವಾರ್ಷಿಕ : ರೂ ೧೦೦/-

ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ

ಜನಪದ ಸೇವಾ ಟ್ರಸ್ಟ್(ರಿ)

ಮೇಲುಕೋಟೆ-೫೭೧ ೪೩೧

ಮಂಡ್ಯ ಜಿಲ್ಲೆ

(08236)298754

e-mail-janapada@yahoo.com

www.janapada.org

ನೆರಳು

ಮೇಲೊಂದು ಗರುಡ ಹಾರುತಿಹುದು
ಕೆಳಗದರ ನೆರಳು ಓಡುತಿಹುದು
ಅದಕೊ ಅದರಿಚ್ಛೆ ಹಾದಿ
ಇದಕೊ ಹರಿದತ್ತ ಬೀದಿ.
ನೆಲನೆಲದಿ ಮನೆಯ ಮನೆಯ ಮೇಲೆ
ಕೊಳ ಬಾವಿ ಕಂಡು ಕಾಣದೋಲೆ
ಗಿಡಗುಲ್ಮ ತೆವರು ತಿಟ್ಟು
ಎನ್ನದಿದಕೊಂದೆ ನಿಟ್ಟು
ಗಾಳಿ ಬೆರಗಿದರ ನೆಲದೊಳೋಟ!
ವೇಗಕಡ್ಡಬಹುದಾವ ಹೂಟ?
ಸಿಕ್ಕು ದಣಿವಿಲ್ಲದಂತೆ
ನಡೆಯಿದಕೆ ನಿಲ್ಲದಂತೆ.
ಇದ ನೋಡಿ ನಾನು ನೆನೆವೆನಿಂದು-
ಇಂಥ ನೆಳಲೇನು ಗಾಂಧಿಯೆಂದು!
ಹರಿದತ್ತ ಹರಿಯ ಚಿತ್ತ
ಈ ಧೀರ ನಡೆವನತ್ತ.

ಪ್ರ. ತಿ. ನ.

ವಿಚಾರ ದೀಪ್ತಿ

ಸತ್ಕಾರ್ಯಕ್ಕಾಗಿ ಹಣವನ್ನು ಖರ್ಚು ಮಾಡುವುದನ್ನು ಖುರಾನಿನಲ್ಲಿ ಒಂದು ಕಾಳು ಏಳು ತೆನೆಗಳ ರೂಪ ಧರಿಸುವುದರೊಂದಿಗೆ ಹೋಲಿಸಿದ್ದಾರೆ. ಈ ಏಳು ತೆನೆಗಳಲ್ಲಿ ನೂರಾರು ಕಾಳುಗಳಿರುತ್ತವೆ.

ಒಂದು ವಾರದಲ್ಲಿ ಏಳು ದಿನಗಳಿವೆ. ಪ್ರತಿಯೊಂದು ದಿನಕ್ಕೂ ಖಗೋಳದಲ್ಲಿಯ ಕಾಯಗಳ ಹೆಸರನ್ನಿಡಲಾಗಿದೆ. ಉದಾಹರಣೆಗೆ ಭಾನು, ಸೋಮ ಮತ್ತು ಇತರ ಗ್ರಹಗಳ ಹೆಸರುಗಳು. ಭಾರತೀಯ ಸಂಗೀತ ಶಾಸ್ತ್ರದಲ್ಲಿ ಕೂಡ ಏಳು ಸ್ವರಗಳಿವೆ. ಧಾರ್ಮಿಕ ಕ್ರಿಯೆಗಳಲ್ಲಿ ಮತ್ತು ಪೂಜೆಗಳಲ್ಲಿ ಕೂಡ ಸಂಖ್ಯೆ ಏಳು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಹಿಂದೂ ವಿವಾಹ ಕಾರ್ಯಗಳಲ್ಲಿ ದಂಪತಿಗಳು ಪವಿತ್ರ ಅಗ್ನಿಯ ಸುತ್ತ ಸಪ್ತಪದಿ ಎಂಬ ಹೆಸರಿನಲ್ಲಿ ಏಳು ಸುತ್ತು ನಡೆಯುತ್ತಾರೆ. ಉಪನಯನ ಕಾಲದಲ್ಲಿ ಕೂಡ ಪೂಜೆಮಾಡುವಾಗ ದೇವತೆಗಳನ್ನು ಏಳುಸಲ ಸುತ್ತಲಾಗುತ್ತದೆ ಹಾಗೂ ಏಳು ಋಷಿಗಳಿಗೆ ಪೂಜೆಮಾಡಲಾಗುತ್ತದೆ. ತಿರುಪತಿ ದೇವಸ್ಥಾನದ ಮೂಲದೇವರಾದ ಶ್ರೀ ವೆಂಕಟೇಶ್ವರನನ್ನು ಏಳು ಗುಡ್ಡಗಳ ಒಡೆಯ, 'ಸಪ್ತಗಿರಿ ಪ್ರಭು' ಎಂದೆಲ್ಲ ಬಣ್ಣಿಸಲಾಗಿದೆ. ಹಜ್ ಧರ್ಮಯಾತ್ರೆಯ ಸಂದರ್ಭದಲ್ಲಿ ಮುಸ್ಲಿಂ ಯಾತ್ರಿಗಳು 'ತವಾಫ್' ಎಂಬ ಧಾರ್ಮಿಕ ಕ್ರಿಯೆಯನ್ನು ಮಾಡಬೇಕಾಗುತ್ತದೆ. ಅಂದರೆ ಕಾಬಾದಲ್ಲಿಯ ಪೂಜಾಸ್ಥಳವನ್ನು ಸುತ್ತಬೇಕಾಗುತ್ತದೆ ಹಾಗೂ ಮೆಕ್ಕಾದಲ್ಲಿ ಸಾಫಾ ಮತ್ತು ಮಾರ್ವ ಎಂಬ ಬೆಟ್ಟಗಳ ಮಧ್ಯೆ ಏಳುಬಾರಿ ಓಡಾಡಬೇಕಾಗುತ್ತದೆ. ಖುರಾನಿನಲ್ಲಿಯ ಮೊದಲನೆಯ ಅಧ್ಯಾಯದ ಹೆಸರು ಫತೇಹ. ಈ ಅಧ್ಯಾಯವು ಖುರಾನ್ ಗ್ರಂಥದ ಸಾರವೆಂದು ಪರಿಗಣಿಸಲಾಗಿದೆ. ಈ ಅಧ್ಯಾಯದಲ್ಲಿ ಅಲ್ಲಾಹುವನ್ನು ವರ್ಣಿಸುವ ಏಳು ಪದ್ಯಗಳಿವೆ. ಭಕ್ತರ ಬಗ್ಗೆ ಇರುವ ದೇವರ ಪ್ರೀತಿಯನ್ನು ಮಗುವಿನ ಬಗ್ಗೆ ಇರುವ ತಾಯಿಯ ಪ್ರೀತಿಗಿಂತ ೭೦ಪಟ್ಟು ಹೆಚ್ಚೆಂದು ವರ್ಣಿಸಲಾಗಿದೆ. ಈ ೭೦ ಎಂಬ ಸಂಖ್ಯೆಯು ಪವಿತ್ರ ಸಂಖ್ಯೆ ಏಳರ ಹತ್ತರಷ್ಟು ಇದೆ.

ಸರ್ವವ್ಯಾಪಿಯಾದ ಈ ಏಳು ಎಂಬ ಸಂಖ್ಯೆಯು ಮಹತ್ವ ಪೂರ್ಣವಾದ ನಂಬಿಕೆಯ ಸಂಕೇತವಾಗಿದೆ. ಈ ನಂಬಿಕೆ ವಿಶ್ವದ ಅನೇಕ ಧರ್ಮಗಳ ಪರಂಪರೆಯನ್ನು ಒಂದು ವೇದಿಕೆಯ ಮೇಲೆ ತಂದು ನಿಲ್ಲಿಸುತ್ತದೆ. ಅದರಿಂದಾಗಿ ವಿವಿಧತೆಯಲ್ಲಿ ಏಕತೆಯ ಆಧಾರ ಶಿಲೆಯ ಮೇಲೆ ಮಾನವಕುಲವು ಎಲ್ಲರೂ ಅನುಭವಿಸಬಹುದಾದ ಆಧ್ಯಾತ್ಮಿಕ ಪರಂಪರೆಯೊಂದನ್ನು ಸೃಷ್ಟಿಸುತ್ತದೆ.

✍ ಕೆ. ಹುಸೇನ್

ಗಾಂಧೀ: ವಿಶಿಷ್ಟ ಜೀವನ ಶೈಲಿಯ ಸಂಕೇತ

ಸುರೇಂದ್ರ ಕೌಲಗಿ

ಅತ್ಯಂತ ತೀವ್ರಗತಿಯಲ್ಲಿ ಬದಲಾಗುತ್ತಿರುವ ಇಂದಿನ ವಿಶ್ವಜೀವನದ ಮಧ್ಯದಲ್ಲಿ ಧ್ರುವತಾರೆಯಂತೆ ಮಾರ್ಗದರ್ಶಿಯಾಗಿ ಉಳಿಯಬಲ್ಲ ಜೀವನಶೈಲಿಯ ಒಂದು ಸಂಕೇತವೇನಾದರೂ ಇದ್ದರೆ ಅದು ಗಾಂಧೀ. ಮುಂದಿನ ಯುಗ ಗಾಂಧೀಯುಗವೆಂದೇ ದೃಢವಾಗಿ ಹೇಳಬಹುದಾದಷ್ಟು ಸತ್ವವುಳ್ಳ ಜೀವನಶೈಲಿಯಾಗಿದೆ ಗಾಂಧೀ ಪ್ರತಿಪಾದಿಸಿದ್ದ ಜೀವನಶೈಲಿ. ಆದ್ದರಿಂದಲೇ ವಿಶ್ವದ ವಿಖ್ಯಾತ ವಿಜ್ಞಾನಿ ಮತ್ತು ದಾರ್ಶನಿಕ ಆಲ್ಬರ್ಟ್ ಐನ್‌ಸ್ಟೈನ್, ಗಾಂಧೀಯಂಥ ವಿಶಿಷ್ಟ ವ್ಯಕ್ತಿ ಈ ಭೂ ಮಂಡಲದಲ್ಲಿ ರಕ್ತಮಾಂಸದೊಂದಿಗೆ ಓಡಾಡಿದ್ದ ಎಂಬುದನ್ನು ಮುಂದಿನ ಪೀಳಿಗೆ ನಂಬಲಾರದೇ ಇರಬಹುದು ಎಂದು ಹೇಳಿದ್ದು ನಿಜವಾಗುತ್ತಿರುವಷ್ಟು ವಿಶಿಷ್ಟ ಜೀವನ ಶೈಲಿಯನ್ನು ಗಾಂಧೀ ಪ್ರತಿಪಾದಿಸಿದ್ದರು. ಗತಿಸಿಹೋದ ಗಾಂಧೀ ಕೇವಲ ಮಾನವನಾಗಿರಲಿಲ್ಲ; ಒಂದು ವಿಚಾರವಾಗಿದ್ದರು, ಒಂದು ಶಕ್ತಿಯೂ ಆಗಿದ್ದರು, ಒಂದು ವಿಶಿಷ್ಟ ಜೀವನಶೈಲಿಯ ಸಂಕೇತವೂ ಆಗಿದ್ದರು. ವಿಶ್ವದ ಕೆಲ ದೇಶಗಳಲ್ಲಿ ಆಯಾ ದೇಶದ ನಾಯಕರ ಪ್ರತಿಮೆಗಳನ್ನು ನಿಲ್ಲಿಸಿ, ನಂತರ ಕೆಡವಿ ಅವುಗಳನ್ನು ಹೂಳಿದ ಸಂಗತಿಗಳಿವೆ. ಮುಂದೆ ಎಂದೆಂದೂ ಆ ಪ್ರತಿಮೆಗಳನ್ನು ನಿಲ್ಲಿಸುವ ಯೋಚನೆ ಮಾಡುವುದಿಲ್ಲ. ಆದರೆ ಗಾಂಧೀ ಬಗ್ಗೆ ಹಾಗೆ ಇಲ್ಲ. ಗಾಂಧೀ ಸತ್ತು ಅರ್ಧಶತಮಾನವಾಯಿತು. ಆದರೂ ಕೂಡ ವಿಶ್ವದ ಎಲ್ಲೆಡೆ ಪ್ರಮುಖ ಸ್ಥಾನಗಳಲ್ಲಿ, ಪ್ರಮುಖ ನಗರಗಳಲ್ಲಿ ಗಾಂಧೀ ಪ್ರತಿಮೆಯನ್ನು ಸಕಲ ಗೌರವಾದರಗಳಿಂದ ಸ್ಥಾಪಿಸಲಾಗುತ್ತಿದೆ.ಯಾವ ದೇಶಗಳು ಗಾಂಧೀ ವಿಚಾರಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದವೋ, ಈಗಲೂ ನಡೆದುಕೊಳ್ಳುತ್ತಿವೆಯೋ ಅಂಥ ದೇಶಗಳಲ್ಲೂ ಗಾಂಧೀ ಪ್ರತಿಮೆ ವಿರಾಜಿಸಿದೆ. ಇಂಥ ಅಸಾಧಾರಣವಾದ ಘಟನೆಗಳು ವಿಶ್ವದ ಬಲಿಷ್ಠ ನಾಯಕರೆನಿಸಿದ್ದ ಸ್ಟಾಲಿನ್, ಹಿಟ್ಲರ್, ಚರ್ಚಿಲ್, ಮುಸಲೋನಿ ಮುಂತಾದ ನಾಯಕರೊಂದಿಗೆ ನಡೆದಿಲ್ಲ. ವಿಶ್ವದ ಎರಡನೇ ಮಹಾಯುದ್ಧದಲ್ಲಿ ಮಿತ್ರಕೂಟ ಸೈನ್ಯದ ಮುಖ್ಯಸ್ಥನಾಗಿ ಜಪಾನಿನ ರಣರಂಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಜನರಲ್ ಮೆಕಾರ್ಥರ್ ಗಾಂಧೀ ಕುರಿತು ಹೇಳಿದ ಮಾತು ಗಮನೀಯ "ಗಾಂಧೀ ಎಂಥ ವಿಶಿಷ್ಟ ಜೀವನಶೈಲಿಯ ವ್ಯಕ್ತಿಯಾಗಿದ್ದ

ಎಂಬುದನ್ನು ವರ್ತಮಾನಕಾಲದ ಅತಿ ಚಂಚಲಿತ ಜೀವನಶೈಲಿಯನ್ನು ಅನುಸರಿಸುತ್ತಿರುವ ನಮಗೆ ಅರ್ಥವಾಗುವುದಾದರೂ ಹೇಗೆ? ಮೆಕಾರ್ಥರ್ ಹೇಳಿದ್ದರು- "ಗಾಂಧೀ ದೂರದರ್ಶಿತ್ವದ ವ್ಯಕ್ತಿ".

ನಿನ್ನೆಯನ್ನು ಸುಲಭವಾಗಿ ಮರೆಯುವ, ನಾಳೆಯನ್ನು ತಿಳಿಯುವ ಯುವಗೋಜಿಗೆ ಹೋಗದ ನಮಗೆ ಯಾವ ಜೀವನ ಶೈಲಿಯಾದರೇನು, ಆ ಶೈಲಿಯಿಂದ ಸಮಾಜದ ಮೇಲೂ, ಪರಿಸರದ ಮೇಲೂ ಯಾವ ಪರಿಣಾಮವಾದರೇನು? ಅದರ ಚಿಂತೆ ನಮಗಿಂದು ಬೇಕಿಲ್ಲವಾಗಿದೆ. ಗಾಂಧೀ ಪ್ರತಿಪಾದಿಸಿದ ಜೀವನಶೈಲಿಯು ಪ್ರತಿಯೋರ್ವ ವ್ಯಕ್ತಿಯ ಆತ್ಮವನ್ನು ಶುದ್ಧಗೊಳಿಸುತ್ತದೆ, ಬಂಧಮುಕ್ತನನ್ನಾಗಿ ಮಾಡುತ್ತದೆ. ಆದರೆ ಈಗ ವಿಶ್ವವು ಅನುಸರಿಸಲು ಚಡಪಡಿಸುತ್ತಿರುವ ಜೀವನಶೈಲಿಯು ವ್ಯಕ್ತಿಯ ಆತ್ಮವನ್ನು ಮಲಿನಗೊಳಿಸುತ್ತದೆ, ಬಹು ವಿಧವಾಗಿ ಬಂಧಿಸುತ್ತದೆ. ಆಧುನಿಕ ಜೀವನಶೈಲಿ ವ್ಯಾಖ್ಯೆ ರಹಿತವಾಗಿದೆ. ಅವರವರಿಗೆ ತೋರಿದಂತೆ ವ್ಯಾಖ್ಯೆ ಮಾಡಲಾಗುತ್ತಿದೆ. ಇದರ ಪರಿಣಾಮ ಸಮಾಜದಲ್ಲಿಯೂ, ಮನುಷ್ಯನ ಮನಸ್ಸಿನಲ್ಲಿಯೂ ಅಶಾಂತಿ, ಗೊಂದಲ, ತುಮುಲಗಳೇರ್ಪಟ್ಟಿದೆ. ಅಭಿವೃದ್ಧಿ ಎಂಬ ವಿಷಯವೂ [redacted], ಅತ್ಯಂತ ಅಶಾಂತಿಗೂ, ಗೊಂದಲಕ್ಕೂ, ತುಮುಲಕ್ಕೂ ಕಾರಣವಾಗಿದೆ. ಇಂದಿನ ಅಭಿವೃದ್ಧಿ ಭೌತಿಕ ಸುಖವೆಂಬ ಮರೀಚಿಕೆಯ ಬೆನ್ನುಹತ್ತಿದೆ. ಇದರ ವ್ಯಾಖ್ಯೆ ಭೂಮಿ-ಆಕಾಶವನ್ನು ಆವರಿಸಿಕೊಂಡಿದೆ. ತಂತ್ರಜ್ಞಾನವನ್ನೂ, ವಿಜ್ಞಾನವನ್ನೂ ತನ್ನ ತೊತ್ತನ್ನಾಗಿ ಮಾಡಿಕೊಂಡಿದೆ. ಸಣ್ಣದಾಗಿ ಪ್ರಾರಂಭವಾದ ಅಭಿವೃದ್ಧಿಯ ಕಲ್ಪನೆ ವಾಮನನ ರೂಪದಂತೆ ತ್ರಿವಿಕ್ರಮ ರೂಪ ತಾಳುತ್ತಿದೆ. ಕೊನೆಗೆ ವಾಮನನ ಮೂರನೆಯ ಚಿಕ್ಕ ಹೆಜ್ಜೆಯ ಭಾರಕ್ಕೆ ಬಲಿ ಚಕ್ರವರ್ತಿ ಹೇಗೆ ತತ್ತರಿಸಿಹೋದನೋ ಅಂತೆಯೇ ಇಂದು ವಿಶ್ವವೂ ಸಹ ಅಭಿವೃದ್ಧಿಯ ಭೌತಿಕತೆಯ ಕಾರಣದಿಂದಾಗಿ ತತ್ತರಿಸಿಹೋಗುತ್ತಿದೆ. ಯಾವ ಸಾಗರವೂ, ಯಾವ ಬೆಟ್ಟವೂ, ಯಾವ ಗ್ರಹವೂ, ಯಾವ ಅರಣ್ಯವೂ, ಯಾವ ನದಿಯೂ ತತ್ತರಿಸದೇ ಉಳಿದಿಲ್ಲ. ಅಭಿವೃದ್ಧಿಯು ಯುದ್ಧದ ಲಾಲಸೆಗೆ ಬಿದ್ದಿದೆ. ಆದ್ದರಿಂದ ಅಭಿವೃದ್ಧಿಯ ವ್ಯಾಖ್ಯೆಯಲ್ಲಿ ಶಸ್ತ್ರಾಸ್ತ್ರಗಳ ತಯಾರಿಕೆ, ಅವುಗಳ ಪ್ರಯೋಗಕ್ಕಾಗಿ ಯುದ್ಧದ ಹುಡುಕಾಟ ನಡೆದೇ ಇರುತ್ತದೆ. ಇದುವರೆಗೆ ಆಗಿಹೋದ ಎರಡು ಮಹಾ ಯುದ್ದಗಳಿಗೆ ಮುಖ್ಯ ಕಾರಣ ಮುಂದುವರೆದಿದ್ದ ರಾಷ್ಟ್ರಗಳು ಇನ್ನೂ ಅಭಿವೃದ್ಧಿಹೊಂದಬೇಕೆಂಬ ದುರಾಶಾಧಾರಿತ ಪ್ರಯತ್ನದ ಫಲ. ಈ ಶತಮಾನದ ಪ್ರಾರಂಭದಲ್ಲಿ ಅಮೇರಿಕಾ ಇರಾಕಿನ ಮೇಲೆ

ಯುದ್ಧಮಾಡಿದ್ದು ಮತ್ತು ಈಗ ಇರಾನಿನ ಮೇಲೆ ಯುದ್ಧಸಾರಲು ಹೊಂಚು ಹಾಕುತ್ತಿರುವುದೆಲ್ಲದಕ್ಕೂ ಮುಖ್ಯ ಕಾರಣ ಅಭಿವೃದ್ಧಿಗಾಗಿ ಅಗತ್ಯವಿರುವ ಸಂಪನ್ಮೂಲಗಳ ಮೇಲೆ ಒಡೆತನ ಸಾಧಿಸುವುದಕ್ಕಾಗಿ, ಹಿಡಿತಪಡೆಯುವುದಕ್ಕಾಗಿ. ವಿಶ್ವ ರಾಷ್ಟ್ರ ಸಂಸ್ಥೆಯ ಭದ್ರತಾ ಮಂಡಳಿಯಲ್ಲೂ ವಿಶ್ವದ ಕೆಲವೇ ಅಭಿವೃದ್ಧಿಹೊಂದಿದ ರಾಷ್ಟ್ರಗಳು ವಿಟೋ ಅಧಿಕಾರವನ್ನು ಹೊಂದಿ ಜಗತ್ತಿನ ಇತರ ಹಿಂದುಳಿದ ರಾಷ್ಟ್ರಗಳ ಮೇಲೆ ನಿಯಂತ್ರಣ ಸಾಧಿಸಬಯಸುತ್ತಿರುವುದು ತಮ್ಮ ರಾಷ್ಟ್ರಗಳ ಅಭಿವೃದ್ಧಿಯ ವೇಗ ಕುಂಠಿತವಾಗಿರದಿರಲೆಂಬ ಕಾರಣಕ್ಕಾಗಿಯೆ.

೧೯೯೦ರ ದಶಕದಲ್ಲಿ ವಿಶ್ವದಾದ್ಯಂತ ಹಬ್ಬಿದ ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ವಾಣಿಜ್ಯೀಕರಣ, ಕೈಗಾರಿಕೀಕರಣ, ನಗರೀಕರಣ ಮುಂತಾದ ಎಲ್ಲ ಆರ್ಥಿಕ ಕಾರ್ಯಕ್ರಮಗಳೂ ಕೂಡ ಅಭಿವೃದ್ಧಿಯ ಹೊಸ ವ್ಯಾಖ್ಯೆಗಳಾಗಿಬಂದು ಇಂದು ಪ್ರತಿಯೊಬ್ಬ ಮಾನವನನ್ನು ಹಣದ ಪಿಶಾಚಿಯನ್ನಾಗಿ ಮಾಡಿದೆ. ಪೈಪೋಟಿಯನ್ನು ಜೀವನದ ಅಂಶವನ್ನಾಗಿ ಮಾಡಿದೆ. ಪೈಪೋಟಿಯಲ್ಲಿ ಹಿಂದೆ ಬಿದ್ದವನಿಗೆ ಆತ್ಮಹತ್ಯೆಯೇ ಬಿಡುಗಡೆಯ ದಾರಿಯಾಗಿದೆ.

ಅಭಿವೃದ್ಧಿಯ ಇಂಥ ವ್ಯಾಖ್ಯೆ ಹೊಂದಿರುವ ಜೀವನದ ದೃಷ್ಟಿ ಮಾನವನ ಜೀವನಶೈಲಿಯಾಗಬಲ್ಲುದೇ?

ಇದೇ ಮಾನವನ ಜೀವನ ಶೈಲಿಯಾಗುವುದಾದರೆ ವಿಶ್ವದಲ್ಲಿರುವ ಬಹುಸಂಖ್ಯಾತ ಬಡ ಜನರು ನಿರ್ನಾಮವಾಗಿ ಹೋಗುವರು, ಸ್ತ್ರೀಯರು ಮಾನಗೆಟ್ಟವರಾಗಿ ಬದುಕುವರು. ಮಕ್ಕಳು ಜೀವನವಿರೋಧಿಯಾದ ಶಿಕ್ಷಣವನ್ನು ಪಡೆಯುವರು, ಹಳ್ಳಿಗಳೆಂಬ ಸಂಸ್ಥೆಗಳೇ ಇಲ್ಲದಾಗುವವು, ಕೃಷಿ ಹೆಚ್ಚುಹೆಚ್ಚು ಯಾಂತ್ರೀಕೃತಗೊಂಡು ಮನುಷ್ಯ ಪ್ರಕೃತಿಯಿಂದ ದೂರವಾಗುತ್ತಾ ಹೋಗುವನು, ಕೃಷಿಗಾಗಿ ಬಳಸುವ ಪ್ರಾಣಿಗಳು ಕಸಾಯಿಖಾನೆಯ ಯಂತ್ರಗಳಿಗೆ ಕಚ್ಚಾ ವಸ್ತುಗಳಾಗುವವು, ಪ್ರತಿ ರಾಜ್ಯದ ರಾಜಧಾನಿ ಸಿಂಗಾಪುರ ಇಲ್ಲವೇ ಶಾಂಘೈ ಆಗಿ ಪರಿವರ್ತಿತಗೊಂಡು ಸುತ್ತಲಿನ ಭೂ ಪ್ರದೇಶ ಮನುಕುಲದ ಸದ್ಬಳಕೆಯಿಂದ ಶಾಶ್ವತವಾಗಿ ತಪ್ಪಿಹೋಗುವುದು. ರಾಜಕಾರಣ, ಕೈಗಾರಿಕೆ, ಶಿಕ್ಷಣ ಎಲ್ಲವೂ ವಾಣಿಜ್ಯವ್ಯವಹಾರದ ವಸ್ತುಗಳಾಗುವವು. ವಾಸ್ತವಿಕ ವಿಷಯವೆಂದರೆ ಮೇಲೆ ಹೇಳಲಾದ ಎಲ್ಲ ಪ್ರಕಾರದ ದುರ್ದೆಶೆ ಈಗಾಗಲೇ ನಮ್ಮ ದೇಶದ ಹಾಗೂ ವಿಶ್ವದ ಮನುಜಕುಲಕ್ಕೆ ಅಂಟಿಕೊಂಡಿದೆ.

ಈ ದುರ್ದೆಶೆಯಿಂದ ಮಾನವಕುಲ ಮುಕ್ತಿ ಪಡೆಯಬೇಕಾದರೆ ಬೇರೊಂದು

ಜೀವನಶೈಲಿಯನ್ನೇ ತನ್ನದನ್ನಾಗಿ ಮಾಡಿಕೊಳ್ಳುವುದು ಮಾನವಕೋಟಿಗೆ ಅನಿವಾರ್ಯವಾಗುತ್ತದೆ.

ಆ ಭಿನ್ನವಾದ ಜೀವನಶೈಲಿ ವೈಟ್‌ಹೌಸ್‌ನಲ್ಲಿರುವ ಬುಷ್ ಅನುಸರಿಸುತ್ತಿರುವ ಶೈಲಿಯಲ್ಲ. ಇತರ ದೇಶಗಳ ಪ್ರಧಾನಿಗಳು, ಅಧ್ಯಕ್ಷರು ಅನುಸರಿಸುತ್ತಿರುವ ಜೀವನಶೈಲಿಯಲ್ಲ,ಹವಾನಿಯಂತ್ರಿತ ಮಹಲುಗಳಲ್ಲಿ ಕುಳಿತು ತಯಾರಿಸುವ ಯೋಜನಾಕಾರರ ಜೀವನಶೈಲಿಯಲ್ಲ. ವಿಚಾರಸರಣಿಯೂ ಅಲ್ಲ. ಬಹು ಸಮರ್ಪಕವೆಂದೆನಿಸುವ ಜೀವನ ಶೈಲಿ ಈಗ್ಯೆ ತೊಂಭತ್ತು ವರ್ಷಗಳ ಹಿಂದೆ ಗಾಂಧೀ ಪ್ರಾರಂಭಿಸಿದ್ದ ಸತ್ಯಾಗ್ರಹ ಆಶ್ರಮದ ಶೈಲಿ. ಅರವತ್ತೊಂಭತ್ತು ವರ್ಷಗಳ ಹಿಂದೆ ಪ್ರಾರಂಭಿಸಿದ್ದ ಸೇವಾಗ್ರಾಮ ಆಶ್ರಮದ ಜೀವನಶೈಲಿ. ಈ ಆಶ್ರಮಗಳಲ್ಲಿ ಗಾಂಧೀ ನಡೆಸಿದ್ದ ಜೀವನಶೈಲಿಯೆಂದರೆ ಅವರು ಆ ಜೀವನಶೈಲಿಗಳ ಮೂಲಕ ಇಡೀ ಪ್ರಪಂಚಕ್ಕೆ ಸಾರಿದ್ದ ಸಂದೇಶ ಮತ್ತು ವಿಚಾರ. ನೂರಕ್ಕೆ ನೂರು ಅಂಕ ಪಡೆಯುವ ರೀತಿಯಲ್ಲಿ ಆ ಶೈಲಿಗಳ ಪಾಲನೆಯೆಂದರ್ಥವಲ್ಲ. ಅದರ ನಿರೀಕ್ಷಣೆಯೂ ಇಲ್ಲ. ಆದರೆ ಗಾಂಧೀಯವರ ಆ ಆಶ್ರಮ ಜೀವನಶೈಲಿಗಳ ಹಿಂದೆ ಇದ್ದ ಆಶಯಗಳನ್ನು, ದೂರದರ್ಶಿತ್ವವನ್ನು ತಿಳಿದು ಇಂದಿನ ಎಲ್ಲ ಕ್ಷೇತ್ರಗಳಲ್ಲಿ ಅಳವಡಿಸಿಕೊಳ್ಳುವುದರ ಅಗತ್ಯವನ್ನು ತಿಳಿಯುವುದು. ಇದು ಎಲ್ಲರೂ ತುರ್ತಾಗಿ ಗಮನಿಸಬೇಕಾದ ವಿಷಯವಾಗಿದೆ. ಇಂದಿನ ವಿಶ್ವದ ಜೀವನಶೈಲಿ ಅತ್ಯಂತ ವೇಗದ ಜೆಟ್‌ವಿಮಾನದ ವೇಗಕ್ಕೆ ಸಮಾನವಾದ ವೇಗದಲ್ಲಿ ಬದಲಾಗುತ್ತಿದೆ. ಇಂದಿರುವ ಜೀವನಶೈಲಿ, ವಿಚಾರಕ್ರಮ, ಕಾರ್ಯವಿಧಾನ ನಾಳೆಗೆ ಇರುವುದಿಲ್ಲ. ಹಳೆಯದೆಲ್ಲವೂ ಕೊಚ್ಚಿಹೋಗುತ್ತಿದೆ. ಇಷ್ಟು ವೇಗದಲ್ಲಿ ಜೀವನ ಶೈಲಿ ಬದಲಾಗುತ್ತಾ ಹೋಗುವುದೆಂದರೆ, ಎಷ್ಟೇ ಕಂಪ್ಯೂಟರಾಧಾರಿತ ಪರೀಕ್ಷೆಗೆ ಒಳಗಾಗಿದ್ದರೂ, ಗಗನಕ್ಕೆ ಹಾರಬೇಕಾದ ಅತಿವೇಗದ ವಿಮಾನ ಭೂಮಿಯಿಂದ ಮೇಲೇರಿದ ಮರುಕ್ಷಣದಲ್ಲೇ ಬೆಂಕಿಹತ್ತಿ ಭೂಮಿಗೆ ಬಿದ್ದು ತನ್ನ ಒಡಲಲ್ಲಿದ್ದ ಎಲ್ಲ ಪ್ರಯಾಣಿಕರ ಸಾವಿಗೆ ಈಡುಮಾಡುತ್ತಿರುವ ಘಟನೆಗಳಂತೆ. ನಮ್ಮ ಇಂದಿನ ವೇಗದ ಜೀವನಶೈಲಿಯಿಂದಲೂ ಅದೇರೀತಿ ಆಗುವ ಸಾಧ್ಯತೆ ಇದೆ; ಆಗುತ್ತಲೂ ಇದೆ. ಸುನಾಮಿ, ಕತ್ರಿನಾ, ರಿಟಾ.. ಇಂಥ ದುರಂತಗಳು, ನಗರಗಳಲ್ಲಿ ಉಂಟಾಗುತ್ತಿರುವ ಪ್ರವಾಹಗಳು, ಎಣ್ಣೆಯ ಸ್ಥಾವರಗಳಲ್ಲಿ ದಿನಗಟ್ಟಲೇ ಉರಿಯುತ್ತಿರುವ ಬೆಂಕಿ, ಬೃಹತ್ ಅಣೆಕಟ್ಟೆಗಳಲ್ಲಿಯ ನೀರಿನ ಭಾರದಿಂದ ಭೂಮಿಯೊಳಗೆ ಆಗುತ್ತಿರುವ ಕಂಪನ ಇತ್ಯಾದಿಗಳೆಲ್ಲಕ್ಕೆ ವಿಚಾರಹೀನ, ಬುದ್ಧಿಹೀನ, ಹೊಟ್ಟೆಬಾಕ ಜೀವನಶೈಲಿಯೇ

ಕಾರಣವೆಂದು ಪ್ರತ್ಯೇಕವಾಗಿ ಹೇಳಬೇಕೆ? ಇದೆಲ್ಲವೂ ಅಭಿವೃದ್ಧಿಗಾಗಿಯೇ ಎಂದೆಲ್ಲ ಸಮರ್ಥಿಸಿಕೊಳ್ಳುವುದುಂಟು. ಆದರೆ ಈ ಅಭಿವೃದ್ಧಿಯೆಂಬುದು ಡಾಲರ್ ಎಂಬ ದೇವರನ್ನು ಪೂಜಿಸುತ್ತದೆ ಎಂಬುದನ್ನು ಮರೆಮಾಚಲಾದೀತೆ? ವಿಶ್ವದಾದ್ಯಂತ ಇರುವ ಅಭಿವೃದ್ಧಿಹೊಂದಿದ, ಹೊಂದದೇ ಇರುವ ಎಲ್ಲ ದೇಶಗಳಲ್ಲಿಯ ಪ್ರಗತಿಯನ್ನು ವ್ಯಕ್ತಿಯ ಜೀವನದ ಹಂತದಲ್ಲಿ, ರಾಷ್ಟ್ರ ಜೀವನದ ಹಂತದಲ್ಲಿ, ಪ್ರತಿಯೊಂದು ಪ್ರಕಾರದ ಸಂಸ್ಥೆಗಳ ಹಂತದಲ್ಲಿ ಪ್ರಗತಿಯನ್ನು ಡಾಲರ್‌ನಲ್ಲಿಯೇ ಲೆಕ್ಕ ಹಾಕಲಾಗುತ್ತಿದೆ. ಈ ಪ್ರಕಾರದ ಲೆಕ್ಕದಲ್ಲಿ ಮಾನವೀಯ ಅಂಶಗಳಿರುವುದಿಲ್ಲವೆಂಬುದು ನಿರ್ವಿವಾದ. ಆದ್ದರಿಂದ ಡಾಲರ್ ಪೂಜಾಧಾರಿತ ಜೀವನಶೈಲಿಗಿಂತ ಗಾಂಧಿ ಹೇಳಿದ್ದ, ನಡೆಸಿದ್ದ ಸರಳ ಜೀವನಶೈಲಿ ಇಂದು ಅತ್ಯಗತ್ಯ. ಇತ್ತೀಚೆಗಿನ ವಿಶ್ವದಲ್ಲಿ ಎಲ್ಲ ಪ್ರಮುಖ ಧರ್ಮಗಳು ತಮ್ಮ ಜೀವಸತ್ವವನ್ನು ಮರೆತು ಡಾಲರ್ ಬಲವನ್ನು ಅವಲಂಬಿಸಿವೆ. ಗಾಂಧೀ ಹೇಳಿದ್ದ ಸರ್ವಧರ್ಮ ಸಮಭಾವದ ಜೀವನಶೈಲಿ ಮಂದಿರ, ಮಸ್ಜಿದ, ಚರ್ಚ್‌ಗಳ ಅಡಿಪಾಯದಲ್ಲಿ ಸೇರಿಹೋಗಿದೆ; ಅವುಗಳ ಶಿಖರಗಳಲ್ಲಿ ತಾಮಸಿಕ ಜೀವನ ಬಿಂಬಿತವಾಗಿದೆ, ಯಾರು ನೋವು ಅನುಭವಿಸಿರುತ್ತಾರೋ ಅವರೇ ದೇವರನ್ನು ಪ್ರಾರ್ಥಿಸಬಲ್ಲರು ಎಂದು ಗಾಂಧೀ ಧರ್ಮಾನುಯಾಯಿಗಳಲ್ಲಿರಬೇಕಾದ ಜೀವನಶೈಲಿಯನ್ನು ಕುರಿತು ಹೇಳಿದ್ದರು. ಆದರೆ ಈಗ ಏನಾಗುತ್ತಿದೆ? ತನ್ನ ಧರ್ಮದಲ್ಲದವರು ಕಾಫರರು, ಅವರಿಗೆ ಏಸು ಪ್ರೇಮ ತೋರಿಸುವುದಿಲ್ಲ, ಕೃಷ್ಣ ಮೋಕ್ಷದ ದಾರಿತೋರಿಸುವುದಿಲ್ಲ ಎಂಬ ಭಾವನೆ ಬೆಳೆದು ಮತಾಂತರ ಮಾಡುವುದು ಧರ್ಮಗಳ ಕಾಯಕವಾಗಿದೆ. ರಾಜಕಾರಣ ಮಂತಾಂಧತೆಯ ಜೊತೆ ಸಂಲಗ್ನಗೊಂಡಿದೆ

ಪ್ರಕೃತಿಯು ಎಲ್ಲರ ಬೇಡಿಕೆಯನ್ನು ಪೂರೈಸಬಲ್ಲದು. ಆದರೆ ಯಾವುದೇ ಒಬ್ಬನ ದುರಾಶೆಯನ್ನು ಪೂರೈಸಲಾರದು ಎಂದು ಹೇಳಿದ್ದ ಗಾಂಧೀ ಜೀವನಶೈಲಿ ಇಂದು ಪ್ರಕೃತಿಯನ್ನು ನಾಶಮಾಡುವ ಭರಾಟೆಯಲ್ಲಿ ಮರೆತು ಹೋಗಿದೆ. ಒಬ್ಬನಲ್ಲ ಎಲ್ಲರೂ ಅತಿ ದುರಾಶೆಯಿಂದ ಪ್ರಕೃತಿಯನ್ನು ದೋಚುತ್ತಿದ್ದಾರೆ. ಆಗ ಉಂಟಾಗುವ ಪರಿಣಾಮ ನೂರು ಪರಮಾಣು ಬಾಂಬಿಗಿಂತಲೂ ಭೀಕರವಾಗಿರುತ್ತದೆ.

ಆದ್ದರಿಂದ ಮಾನವೀಯತೆಯನ್ನು ಪುನರುಜ್ಜೀವಿಸುವ ಗಾಂಧೀ ಜೀವನಶೈಲಿಯತ್ತ ವಿಶ್ವ ಮುಖಮಾಡಬೇಕಾಗಿದೆ, ಇಲ್ಲವೆ ದುರಂತವನ್ನೆದುರಿಸಲು ಸಿದ್ಧವಾಗಬೇಕಿದೆ.

* * * *

ಗಾಂಧೀಜಿ ಮತ್ತು ಜೀವನ ಶಿಕ್ಷಣ

✍ ಪ್ರೊ॥ ಕೆ. ಶ್ರೀನಿವಾಸನ್

ಕೇವಲ ದೈಹಿಕ ಬೆಳವಣಿಗೆ ಹಾಗೆಯೆ ಕೇವಲ ಬೌದ್ಧಿಕ ಬೆಳವಣಿಗೆ ಸಂಪೂರ್ಣ ಶಿಕ್ಷಣವಾಗಲಾರದು. ಗಾಧೀಜಿಯವರ ಪ್ರಕಾರ, ಬೌದ್ಧಿಕ ಶ್ರಮ ಮತ್ತು ದೈಹಿಕ ದುಡಿಮೆ ಇವೆರಡನ್ನು ಬೇರ್ಪಡಿಸಿ, ದೇಹ ಮತ್ತು ಬುದ್ಧಿ ಇವುಗಳಿಗೆ ಸಂಬಂಧಿಸಿದಂತೆ, ಬೇರೆ ಬೇರೆಯಾಗಿ ಬೋಧನೆ-ಕಲಿಕೆಯ ಶಿಕ್ಷಣವನ್ನು ವ್ಯವಸ್ಥೆ ಮಾಡುವುದು ಸರಿಯಲ್ಲ. ಇವೆರಡನ್ನೂ ಒಟ್ಟುಗೂಡಿಸಿ ಒಂದು ಏಕೀಕೃತ ಶಿಕ್ಷಣವನ್ನು ರೂಪಿಸಿ ಮಕ್ಕಳನ್ನು ಅದಕ್ಕೆ ಒಳಪಡಿಸುವುದು ಸಮಂಜಸ ಎಂದಿದ್ದಾರೆ ಗಾಂಧೀಜಿ. ಈ ತತ್ವಕ್ಕನುಸಾರವಾಗಿ, ಗಾಂಧೀಜಿ ಮೂಲಶಿಕ್ಷಣವನ್ನು, ಅದರಲ್ಲೂ ಅದರ ಪ್ರಾಥಮಿಕ ಹಂತಗಳಲ್ಲಿ, ಸೂಕ್ತ ರೀತಿಯಲ್ಲಿ ರೂಪಿಸಿದ್ದಾರೆ. ಅವರ ಪ್ರಕಾರ, ಕೆಲಸ ಅಥವಾ ದೈಹಿಕ ದುಡಿಮೆಯೂ ಕೂಡ ತಿಳುವಳಿಕೆ ಪಡೆಯಲು ಸೂಕ್ತ ಸಾಧನವಾಗಬಲ್ಲದು. ಆದ್ದರಿಂದ ದುಡಿಮೆಯ ಮೂಲಕ ಕಲಿಕೆ ಮತ್ತು ವಿದ್ಯಾಭ್ಯಾಸ ಎಂಬ ತತ್ವವನ್ನು ಒಪ್ಪಬೇಕು ಮತ್ತು ಇದನ್ನು ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಿಕೊಳ್ಳಬೇಕು. ಇದಕ್ಕನುಸಾರವಾಗಿ ಮೂಲ ಶಿಕ್ಷಣ ವ್ಯವಸ್ಥೆಯಲ್ಲಿ 'ದುಡಿಮೆಯ ಮೂಲಕ ಶಿಕ್ಷಣ' ಎಂಬ ತತ್ವಕ್ಕೆ ಪ್ರಾಧಾನ್ಯತೆ ನೀಡಲಾಗಿದೆ. ದುಡಿಮೆಯ ಮೂಲಕ ವಿದ್ಯಾರ್ಥಿಗಳು ಸಲ್ಪಮಟ್ಟಿಗೆ ತಿಳುವಳಿಕೆ ಪಡೆಯುವುದೇ ಅಲ್ಲದೆ ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು. ಹಾಗೂ ಶರೀರ ಶ್ರಮದ ಬಗ್ಗೆ ಗೌರವಯುತ ಮನೋಭಾವ ಬೆಳೆಸಿಕೊಳ್ಳಬಹುದು.

ಮೂಲ ಶಿಕ್ಷಣದ ಪ್ರಾರಂಭಿಕ ಹಂತಗಳಲ್ಲಿ, ಅಂದರೆ ಮಕ್ಕಳ ವಿದ್ಯಾಭ್ಯಾಸದಲ್ಲಿ ಕುಶಲ ಚಟುವಟಿಕೆಗಳಿಗೆ (Craft based activity)ಪ್ರಾಧಾನ್ಯತೆ ನೀಡಲಾಗಿದೆ. ಮಕ್ಕಳ ಪ್ರಾರಂಭಿಕ ಶಿಕ್ಷಣದಲ್ಲಿ, ಅವರಿಗೆ ಯಾವುದಾದರೂ ಒಂದು ಉಪಯುಕ್ತ ಕಲಿಕೆಗೆ ಅವಕಾಶಮಾಡಿಕೊಡುವುದು ಆವಶ್ಯಕ. ಮರಗೆಲಸ, ತೋಟಗಾರಿಕೆ, ಸರಳ ಬೇಸಾಯ, ನೂಲುವುದು ಇತ್ಯಾದಿ ಪೈಕಿ ಯಾವುದಾದರೊಂದು ವೃತ್ತಿ ಸಂಬಂಧ ಶಿಕ್ಷಣದ ಮೂಲಕ ಶಿಕ್ಷಣ ಒದಗಿಸಬೇಕು. ಇದರೊಂದಿಗೆ ಸಾಹಿತ್ಯಾಭ್ಯಾಸ, ಗಣಿತ ಮತ್ತು ವಿಜ್ಞಾನ ಕಲಿಕೆ ಇವುಗಳನ್ನೂ ಸಂಯೋಜಿಸಿ ಮಕ್ಕಳಲ್ಲಿ ಎಲ್ಲ ರೀತಿಯ ಆಸಕ್ತಿಯನ್ನು ಬೆಳೆಸಿ ಪೋಷಿಸಬೇಕು. ಹಾಗೆ ಮಾಡಿದಲ್ಲಿ ವಿದ್ಯಾಭ್ಯಾಸ ಕೇವಲ ಬೌದ್ಧಿಕ ಕಸರತ್ತಾಗದೆ ಮಕ್ಕಳಲ್ಲಿ ಕುಶಲತೆ ಮತ್ತು ಜಾಣ್ಮೆ, ಮತ್ತು ಇದೇ ರೀತಿಯ ಇತರ ಸಾಮರ್ಥ್ಯಗಳೂ ಅಭಿವೃದ್ಧಿಯಾಗಲು ಅನುವಾಗುತ್ತದೆ. ಶರೀರ ಶ್ರಮವನ್ನು ಬುದ್ಧಿವಂತಿಕೆಯಿಂದ ಬಳಸಿಕೊಂಡಲ್ಲಿ ಅದು ಉತ್ತಮ ಬೌದ್ಧಿಕ ಬೆಳವಣಿಗೆಗೆ ಸಾಧನವಾಗಬಲ್ಲದು. ಇದೇ ಧಾಟಿಯಲ್ಲಿ ಮುಂದುವರಿಯುತ್ತಾ ಗಾಂಧೀಜಿಯವರು ಆಧ್ಯಾತ್ಮಿಕ ಶಕ್ತಿ ಸಾಮರ್ಥ್ಯಗಳನ್ನೂ ಪೋಷಿಸಿದರೆ ಅದರ ಜೊತೆಯಲ್ಲೆ ಮಗುವಿನ ಬೆಳವಣಿಗೆಯೂ ಸಮರ್ಪಕವಾಗಿ

ಅಭಿವೃದ್ಧಿಯಾಗುವ ಸಾಧ್ಯತೆ ಇರುತ್ತದೆಂದು ಹೇಳಿದರು.

ಇಂದಿನ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಕೇವಲಬೌದ್ಧಿಕ ಬೆಳವಣಿಗೆಗೆ ಕೇಂದ್ರಿತವಾಗಿದ್ದು ಅವರ ವ್ಯಕ್ತಿತ್ವದ ಸರ್ವಾಂಗೀಣ ಅಭಿವೃದ್ಧಿಯ ಕಡೆ ಹೆಚ್ಚು ಗಮನ ಹರಿದಿಲ್ಲ. ಆದರೆ ಗಾಂಧೀ ರೂಪಿಸಿದ ಶಿಕ್ಷಣ ಪದ್ಧತಿಯಲ್ಲಿ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆ ಕೇಂದ್ರ ಬಿಂದುವಾಗಿದೆ. ಮುಂದೆ ತಿಳಿಸುವಂತೆ ಗಾಂಧೀಜಿಯವರ ಮೂಲ ಶಿಕ್ಷಣ ೩ಆರ್ ಶಿಕ್ಷಣ ಆಗದೆ ಅದು ೩ಹೆಚ್ ಶಿಕ್ಷಣ ಆಗಿದೆ.

ಕೆಲವು ಶಿಕ್ಷಣ ತಜ್ಞರ ಪ್ರಕಾರ, ಶಿಕ್ಷಣದ ಉದ್ದೇಶ ಮತ್ತು ಗುರಿ ಇವುಗಳ ದೃಷ್ಟಿಯಿಂದ ಇಂದಿನ ಶಿಕ್ಷಣ ಪದ್ಧತಿ ೩ಆರ್ ಪದ್ಧತಿಯಾಗಿಯೂ, ಗಾಂಧೀಜಿ ರೂಪಿಸಿದ ಮೂಲ ಶಿಕ್ಷಣ ಪದ್ಧತಿ ೩ಹೆಚ್ ಶಿಕ್ಷಣ ಪದ್ಧತಿಯಾಗಿಯೂ ಇರುವುದು ಕಂಡುಬರುತ್ತದೆ. ಇಂದಿನ ಶಿಕ್ಷಣ ಪದ್ಧತಿ ೩ಆರ್ ಶಿಕ್ಷಣ ಪದ್ಧತಿ ಎಂದನಲ್ಲವೆ, ಇದರ ಅರ್ಥ ಈ ಪದ್ಧತಿಯ ೩ಆರ್‌ಗಳು ಕ್ರಮವಾಗಿ Writing ಅಂದರೆ ಬರೆಯುವುದು, Reading ಅಂದರೆ ಓದುವುದು ಮತ್ತು Arithmeticಅಂದರೆ ಲೆಕ್ಕ ಮಾಡುವುದು, ಇವುಗಳನ್ನು ಸೂಚಿಸುತ್ತದೆ. ಹೀಗಾಗಿ, ಈ ೩ಆರ್ ಶಿಕ್ಷಣ ಪದ್ಧತಿ ಕೇವಲ ಬೌದ್ಧಿಕ ಬೆಳವಣಿಗೆ ಪ್ರಧಾನವಾದ ವಿದ್ಯಾಭ್ಯಾಸ ಪದ್ಧತಿಯಾಗಿ ಪರಿಣಮಿಸಿದೆ. ಇದಕ್ಕೆ ಪ್ರತಿಯಾಗಿ, ಗಾಂಧೀಜಿ ರೂಪಿಸಿದ ಮೂಲ ಶಿಕ್ಷಣ ಪದ್ಧತಿ ೩ಹೆಚ್ ಪದ್ಧತಿ ಆಗಿದೆ. ಇಲ್ಲಿಯ ೩ಹೆಚ್‌ಗಳು ಕ್ರಮವಾಗಿ Head ಅಂದರೆ ಬುದ್ಧಿವಂತಿಕೆ, Heart ಅಂದರೆ ಹೃದಯವಂತಿಕೆ ಮತ್ತು Handಅಂದರೆ ಕರ ಕೌಶಲತೆ, ಇವುಗಳನ್ನು ಸೂಚಿಸುತ್ತವೆ. ಅಂದರೆ ೩ಹೆಚ್ ಶಿಕ್ಷಣ ಪದ್ಧತಿ, ಕೇವಲ ಬೌದ್ಧಿಕ ಬೆಳವಣಿಗೆಯನ್ನು ಶಿಕ್ಷಣದ ಏಕೈಕ ಗುರಿಯನ್ನಾಗಿ ಮಾಡದೆ ಹೃದಯವಂಜತಿಕೆ ಅಂದರೆ ವಿದ್ಯಾರ್ಥಿಗಳಲ್ಲಿ ಮೌಲ್ಯಪ್ರಜ್ಞೆಯನ್ನು ಬೆಳೆಸಿ ಅಭಿವೃದ್ಧಿಪಡಿಸುವುದು; ಹಾಗೆಯೇ ಕರಕೌಶಲತೆಯನ್ನು ಅಂದರೆ ವಿದ್ಯಾರ್ಥಿಗಳ ಕರಣೇಂದ್ರಿಯವನ್ನು ಚೇತನಗೊಳಿಸಿ ಅವುಗಳ ಶಕ್ತಿಸಾಮರ್ಥ್ಯವನ್ನು ಬೆಳೆಸುವುದು– ಈ ರೀತಿ ವಿದ್ಯಾರ್ಥಿಗಳ ಸರ್ವಾಂಗೀಣ ಬೆಳವಣಿಗೆಯನ್ನೆ ಉದ್ದೇಶವನ್ನಾಗಿ ಹೊಂದಿರುವ ಶಿಕ್ಷಣ ವ್ಯವಸ್ಥೆ. ಗಾಂಧೀಜಿಯವರ ಮೂಲ ಶಿಕ್ಷಣ ವ್ಯವಸ್ಥೆ ಹೀಗೆ ೩ಹೆಚ್ ಶಿಕ್ಷಣವಾಗಿದ್ದು, ಅದು ಪರಿಪೂರ್ಣ ಶಿಕ್ಷಣವನ್ನು ಒದಗಿಸಬಲ್ಲ ಸಾಧ್ಯತೆಯನ್ನು ಹೊಂದಿದೆ.

ಕಡೆಯದಾಗಿ, ಜೀವನ ಶಿಕ್ಷಣದ ಪ್ರಾಮುಖ್ಯತೆಯ ಬಗ್ಗೆ ಗಾಂಧೀಜಿಯವರ ಮಾತಿನಲ್ಲೇ ಹೇಳುವುದಾದರೆ "ನಾನು ಭಾರತಕ್ಕೆ ಅನೇಕ ಕೊಡುಗೆಗಳನ್ನು ನೀಡಿದ್ದೇನೆ, ಅವೆಲ್ಲದರಲ್ಲಿ ನಾನು ರೂಪಿಸಿದ ಜೀವನ ಶಿಕ್ಷಣದ ಕಲ್ಪನೆ ಮತ್ತು ಅದರ ಕಾರ್ಯತಂತ್ರ ವಿಧಾನಕೊಟ್ಟು ನನ್ನ ಅತ್ಯುತ್ತಮ ಕೊಡುಗೆ ಎಂದು ಭಾವಿಸುತ್ತೇನೆ". ನಮ್ಮ ದುರ್ದೈವ ಎಂದರೆ ಗಾಂಧೀಜಿ, ನಮಗೆ ಕೊಟ್ಟು ಹೋಗಿರುವ ಜೀವನಶಿಕ್ಷಣ ವಿಚಾರಇಂದಿಗೂ ಒಂದು ಕಲ್ಪನೆಯಾಗಿಯೇ ಉಳಿದುಕೊಂಡು ಬಂದಿರುವುದು.

* * * *

ಬಾಪುವಿನೊಡನೆ ಎರಡು ದಿವಸ

✍ ಜೈನೇಂದ್ರ ಕುಮಾರ

"ಬಾಪೂ, ನಾನೊಂದು ಅನುಮತಿಯನ್ನು ಬೇಡುತ್ತೇನೆ,"ಎಂದೆ ನಾನು. ಬಾಪೂ ಕಣ್ಣೆತ್ತಿ ಅರೆಕ್ಷಣ ನನ್ನತ್ತ ನೋಡಿದರು.

"ನಿಮ್ಮ ಈ ಕೋಣೆಯಲ್ಲಿ ಎರಡು ದಿನ ನನಗೆ ಯಾವ ಆತಂಕವೂ ಇಲ್ಲದೆ ಇರಲು ಅನುಮತಿ ಬೇಕು. ನಾನೇನೂ ಮಾತಾಡುವುದಿಲ್ಲ. ಕೇವಲ ಇಲ್ಲಿ ಇದ್ದುಕೊಂಡು ನೋಡುತ್ತಿರಬೇಕೆನ್ನುತ್ತೇನೆ. ನಿಮಗೇನಾದರೂ ತೊಂದರೆಯಾಗುತ್ತದೆಯೆ– ಏನಾದರೂ ಪ್ರೈವೇಟ್ ಮಾತುಕತೆ..."

"ನನ್ನ ಹತ್ತಿರ ಪ್ರೈವೇಟ್ ಏನೂ ಇಲ್ಲವೇ ಇಲ್ಲ, ಎಲ್ಲವೂ ಖುಲ್ಲಾ," ಎಂದು ಬಾಪೂ ನಕ್ಕರು."ಒಂದೇ ಪ್ರೈವೇಟ್ ಅಂದರೆ ಬಾತ್ ರೂಮಿಗೆ ಹೋಗುವುದು. ಆದರೆ ಯಾರಾದರೂ ಬಂದವರು ನನ್ನೊಡನೆ ಆಡುವ ಮಾತುಕಥೆ ಪ್ರೈವೇಟ್ ಆಗಿರಬೇಕೆಂದು ಬಯಸಿದರೆ ಆ ಮಾತು ಬೇರೆ. ಅದು ನಿನಗೆ ಅರ್ಥವಾದೀತಲ್ಲ."ಹೀಗೆ ಎರಡು ದಿನ ನಾನು ಅವರ ಕೋಣೆಯಲ್ಲಿ ಯಾವ ಅಡ್ಡಿ ಆತಂಕವಿಲ್ಲದೆ ಇದ್ದೆ ಬಂದು ಹೋಗುವುದು ಮಾಡಿದೆ. ಆ ಒಂದೊಂದು ಕ್ಷಣವೂ ಒಂದೊಂದು ಅನುಭವವಾಗಿತ್ತು–ಜ್ವಲಂತ ಮತ್ತು ಜಾಗೃತ, ಅವರು ಮಲಗಿದರೂ ಮಲಗಿದಂತಲ್ಲ ಒಳಗೆ ಎಚ್ಚರವಾಗಿಯೇ ಇರುತ್ತಿದ್ದರೆಂದು ಕಂಡೆ. ಬೇರೆ ಕೆಲ ಕರ್ತವ್ಯ ನಿಷ್ಠರ ಹಾಗೆ ಅವರಲ್ಲಿ ಬಿಗುಮಾನವನ್ನಾಗಲ್ಲೀ ಆತ್ಮ ದಮನವನ್ನಾಗಲೀ ಧಾವಂತವನ್ನಾಗಲೀ ನಾನು ಕಾಣಲಿಲ್ಲ. ಅವರಲ್ಲಿ ತಪಸ್ವಿಯ ರೂಪವೂ ನನಗೆ ಕಾಣಲಿಲ್ಲ. ಬದಲಿಗೆ ಭೋಗಿಯಂತೆಯೇ ತೋರಿದರೆನ್ನಬಹುದು. ಅಂದರೆ ಕ್ಷಣ ಕ್ಷಣದಲ್ಲಿಯೂ ನನಗೆ ಅವರು ಹಾರ್ದಿಕ ವ್ಯಕ್ತಿಯಾಗಿ ಕಂಡರು.

ಅವರಲ್ಲಿ ಕೆಲಸ ಮತ್ತು ವಿರಾಮ ಎಂಬೆರಡು ಬೇರೆ ಬೇರೆ ಖಾನೆಗಳು ಕಾಣಿಸಲಿಲ್ಲ. ಕರ್ತವ್ಯ ಕರ್ಮವೇ ಅವರಿಗೆ ಸಹಜ ಕರ್ಮವೂ ಆಗಿತು. ಇದು ಅತ್ಯಂತ ವಿರಳವಾದ ಗುಣ. ಆದರೆ ಗಾಂಧೀಜಿಯ ಶರೀರಯಂತ್ರ ಯಾವ ಸಂಗೀತಕ್ಕೆ ಬೇಕಾದರೂ ಯಾವ ಕ್ಷಣಕ್ಕೂ ಸಜ್ಜಾಗಿದ್ದಂತಿತ್ತು. ಸುತ್ತ ಮುತ್ತಲಿನ ಸಂಗತಿಗಳು ಬಯಸಿದಾಕ್ಷಣ ಅವರಿಗೆ ಶೂನ್ಯವಾಗಿಬಿಡುತ್ತಿದ್ದವು. ಸುತ್ತಲೂ ಜನಸಂದಣಿ ಇದ್ದರೂ ಅವರ ಏಕಾಗ್ರತೆಯನ್ನು ಕೆಡಿಸಲು ಸಮರ್ಥವಾಗುತ್ತಿದ್ದಿಲ್ಲ. ಅವರು ಬರೆಯುತ್ತಾ ಕುಳಿತಾಗ ಅನಿರೀಕ್ಷಿತವಾಗಿ ಎಷ್ಟೇ ಜನ ಬಂದು ಹತ್ತಿರ ಕುಳಿತರೂ ಅವರಿಗೆ ತಾವೂ ಯಾರೂ ಅಲ್ಲಿ ಇಲ್ಲವೇ ಏನೋ ಅನಿಸಿಬಿಡುತ್ತಿತ್ತು.

ಒಮ್ಮೆ ಒಬ್ಬ ಮಹಿಳೆ ಬಂದಳು. ಭಾರತಕ್ಕೆ ಹೊಸಬಳಾಗಿರಬೇಕು. ದರ್ಶನಕ್ಕಾಗಿ ಕಾಯುತ್ತಿದ್ದಳಂತೆ. ಬರುತ್ತಿರುವಾಗ ಪ್ರೀತಿಯಿಂದ, ಸಂತೋಷದಿಂದ ಮತ್ತು ಭಯದಿಂದ ಕಂಪಿಸುವವಳಂತೆ ಕಂಡಳು. ಗಾಂಧೀಜಿ ಹೇಳಿದರು,"ಬಾ ಬಾ! ಇಷ್ಟೇಕೆ ಕೆಂಪೇರುತ್ತಿದ್ದೀ. ಎಲ್ಲಾ ಕ್ಷೇಮ ತಾನೇ! ಪತ್ರ ಮುಟ್ಟಿತೆ?"

ಮಹಿಳೆ ಸಹಜವಾಗಿ ಉತ್ತರಿಸಲು ಅಸಮರ್ಥಳಾದಳು. ಅವಳು ಅಷ್ಟು

ವಿಹ್ವಲಳೂ ಉದ್ವಿಗ್ನಳೂ ಆಗಿದ್ದಳು. ಪತ್ರ ಮುಟ್ಟಿರಲಿಲ್ಲವೆಂದು ಹೇಗೆ ಹೇಗೋ ಹೇಳಬೇಕಾದರೆ ಸಾಕಾಗಿಹೋಯಿತವಳಿಗೆ. ಏನೋ ಅವಘಡವಾದ ಹಾಗೆ.

ಗಾಂಧೀಜಿ ಹೇಳಿದರು: "ಆದರೆ ಅಂದೊಂದು ಪ್ರೇಮ ಪತ್ರವಾಗಿತ್ತು. ನಾನು ಮುದುಕನೆಂದು ತಿಳಿಯಬೇಡ."

ಮಹಿಳೆಯ ಮುಖ ಕೆಂಪುಕೆಂಪಾಯಿತು, ಅವಳು ಏನೇನೋ ನುಡಿದಳು. ನುಡಿಯೇನು, ಅದು ಶುದ್ಧ ಆಹ್ಲಾದದ ಸಾರಬಿಂದುವಾಗಿತ್ತು.

"ನಿಜಕ್ಕೂ ಅವಳು ನನ್ನ ಪ್ರೀತಿಯ ಮಗಳು.. ಈಗ ಹಿಂದುಸ್ತಾನದಲ್ಲಿದ್ದೀ, ಇಲ್ಲಿಯೇ ಸೇವೆ ಮಾಡುವಿಯಂತೆ."

"ನನಗೆ ಇಲ್ಲಿಯ ಭಾಷೆ ಬರುವುದಿಲ್ಲವಲ್ಲ."

"ಒಳ್ಳೆಯದೇ ಆಯಿತು. ಬಾಯಿ ತಂತಾನೆ ಮುಚ್ಚಿರುತ್ತದೆ. ಸಫಾಯಿಯಲ್ಲಿ ತೊಡಗಿದವಳ ಹಾಗೆ. ಯಾರಾದರೂ ಮಾತಾಡುತ್ತಾರೆ. ನೀನು ಎರಡು ಬೆರಳುಗಳನ್ನು ಬಾಯಿಯ ಎದುರು ಹಿಡಿದು ಕೈ ತಿರುಗಿಸಿ ಬಿಡುತ್ತೀ. ನೀನು ಮೂಕಿ ಎಂದು ಆತ ತಿಳಿದುಕೊಳ್ಳುತ್ತಾನೆ. ನಿನಗೆ ಇದು ಒಳ್ಳೆಯದೇ ಆಗುತ್ತದೆ. ನೀನು ಕಸಬರಿಗೆ ಆಡಿಸುತ್ತ ಇರುವಿ."

ಹೇಳಹೇಳುತ್ತ ಗಾಂಧೀಜಿ ಬಾಯಿಗೆ ಬೆರಳುಗಳನ್ನಿಟ್ಟರು, ಕೈತಿರುವಿದರು ಮತ್ತು ಕೊನೆಯಲ್ಲಿ ಕಿಲಕಿಲ ನಕ್ಕರು.

ಈ ಸ್ವಾಗತ ಆ ಮಹಿಳೆಗೆ ಬಹಳ ವಿಚಿತ್ರವೆನಿಸಿತೆಂದು ಕಂಡೆ; ಆದರೆ ಅವಳಿಗೆ ಅದು ಅಷ್ಟೇ ರುಚಿಸಿತೆಂದೂ ಕಂಡೆ. ಆ ಭಾವ ಅವಳ ಮೈಯೆಲ್ಲ ತುಂಬಿ ಹರಿಯಿತೆನ್ನುವಂತೆ ಅವಳು ಗದ್ಗದಿತಳಾದಳು.

ಅವರು ಒಮ್ಮಲೇ ಗಂಭೀರವಾದರು. ಹೇಳಿದರು: "ನಾವು ಕೊನೆಯವರಾಗಬೇಕು...ಅಲ್ಲಿ ಮೊದಲಿನವರು ಕಡೆಯವರಾಗುತ್ತಾರೆ. ಕಡೆಯವರು ಮೊದಲಿನವರಾಗುತ್ತಾರೆ... ನಿಮ್ಮ ಬೈಬಲ್ ಇದೆಯಲ್ಲ. ನಾನೇನೂ ಅದರಲ್ಲಿ ಪಂಡಿತ ಎಂದು ತಿಳಿದುಕೊಳ್ಳಬೇಡ. ನನಗೆ ಅದರಲ್ಲಿ ಗೊತ್ತಿರುವುದು 'ಸರ್ಮನ್ ಆನ್ ದಿ ಮೌಂಟ್' ಒಂದೇ. ಅಂತೂ ನೀನು ಇನ್ನು ಭಾರತದಲ್ಲಿ ಉಳಿಯುವಿ. ಇದೇ ನಿನ್ನ ದೇಶವಾಗುವುದು. ನಾವು ದರಿದ್ರರು. ಆದರೆ ದರಿದ್ರರಲ್ಲಿ ನಾರಾಯಣ ಇರುತ್ತಾನೆ."

ನಡನಡುವೆ ಮಹಿಳೆ ಏನೇನೋ ಅನ್ನುತ್ತಿದ್ದಳು. ಆದರೆ ಶಬ್ದಗಳು ಸರಿಯಾಗಿ ವಾಕ್ಯಗಳಲ್ಲಿ ಹೊಂದಿಕೆಯಾಗುತ್ತಿರಲಿಲ್ಲ. ಅವಳು ಅಷ್ಟು ಉತ್ತೇಜಿತಳಾಗಿದ್ದಳು.

"ಅಂತೂ ನನ್ನ ಪ್ರೇಮ ನಿರರ್ಥಕವಾಗಲಿಲ್ಲ. ನಾವಿಬ್ಬರೂ ಕ್ರಿಸ್ತ ದೇವನ ದಾರಿಯಲ್ಲಿ ಸಾಗುವೆವು."

ಮಹಿಳೆ ತನ್ನ ನೀಲ ನೇತ್ರಗಳಿಂದ ಗಾಂಧೀಜಿಯನ್ನು ದಿಟ್ಟಿಸಿದಳು.

"ಆಯಿತಲ್ಲ. ಇನ್ನು ನೀನು ಆ ಮೂಲೆಯಲ್ಲಿ ಕೂತಿರು. ಕೂತಿರು ಎಂದರೆ ತುಟಿ ಎರಡು ಮಾಡದೆ ಕೂತಿರಬೇಕು. ಉಳಿದದ್ದು ನಾಳೆ."

ಹೇಳು ಹೇಳುತ್ತಾ ಗಾಂಧೀಜಿ ಬೆರಳೆತ್ತಿ ಮೂಲೆಯನ್ನು ತೋರಿಸಿದರು. ತತ್‌ಕ್ಷಣ ತಮ್ಮ ಮುಂದಿದ್ದ ಕಾಗದಗಳಲ್ಲಿ ತನ್ಮಯರಾದರು.

ಕ್ಷಣದಲ್ಲಿ ಮಹಿಳೆ ಸ್ತಬ್ಧಳಾದಳು. ಏನೋ ಅಘಟಿತ ಘಟನೆ ಆದ ಹಾಗೆ. ಎದ್ದು ಹೋಗಿ ಗಾಂಧೀಜಿ ತೋರಿಸಿದ ಮೂಲೆಯಲ್ಲಿ ತೆಪ್ಪಗೆ ಕುಳಿತಳು. ಕುಳಿತು ನೋಡುತ್ತಿದ್ದಳು– ಈ ಗಾಂಧಿ ಪ್ರೇಮಿಯಾಗುತ್ತಾನೆ; ಮತ್ತೆ ಅದರ ಬಲದಿಂದಲೇ ಅಧಿಕಾರ ನಡೆಸುತ್ತಾನೆ.

ಈ ಎರಡು ದಿನಗಳಲ್ಲಿ ಅನೇಕ ಸಂಪರ್ಕಗಳಲ್ಲಿ ನೋಡಿದಿಷ್ಟು. ಈತನಲ್ಲಿ ಪ್ರೇಮ ತುಂಬಿದೆ: ಆದರೆ ತುಳುಕುವುದಿಲ್ಲ, ಹರಿದುಹೋಗುವುದಿಲ್ಲ. ಅವರು ಖಂಡಿತವಾಗಿಯೂ ಸ್ನೇಹಮಯರು, ಆದರೆ ಕಡಿಮೆ ಕಠೋರರರಾಗಿಲ್ಲ. ಅವರು ಅತ್ಯಂತ ದಾರುಣರು ನಿರ್ಮಮರೂ ಹೌದು.

ಬಂತು ತರಕಾರಿಯ ಬುಟ್ಟಿ, ಅಂದೇ ಬೆಳಿಗ್ಗೆ ಯಾವುದೋ ಫಾರ್ಮಿನಿಂದ ಬಂದ ತಾಜಾ ತರಕಾರಿ. ಮೀರಾಬಹನ್ ಹತ್ತಿರ ತಂದಿಟ್ಟರು. ಗಾಂಧೀಜಿಯ ಹಣೆಯಲ್ಲಿ ನರಿಗೆಗಳು ಮೂಡಿದವು ಮೀರಾ ಗಾಬರಿಯಾದಳು.

"ಏನಿದು?"

"ನೋಡಿ ಹೇಳಿರಲ್ಲ. ಮತ್ತೆ . . . ಏನು ತಯಾರಿಸಬೇಕು?"

"ಎಲ್ಲಾ ನನ್ನನ್ನು ಕೇಳಿಯೇ ಆಗಬೇಕೆ? ಎಂದರು ಗಾಂಧೀಜಿ. ಇದೇ ಕೊನೆಯ ಮಾತು ಎಂಬ ಹಾಗೆ. "ನೀವು ಕಲಿಯುವುದು ಯಾವಾಗ? ನನ್ನ ಹತ್ತಿರ ಪುಕ್ಕಟೆ ಸಮಯ ಇದೆಯೆ?"

ಹೀಗೆಂದು ಅವರು ಬುಟ್ಟಿಯನ್ನು ಹತ್ತಿರ ಎಳೆದುಕೊಂಡರು. ಬಸಳೆಯ ಎಲೆಯನ್ನು ನಡುವೆ ಹಿಡಿದು ಬಗ್ಗಿಸಿದರು. ಅದು ಒಡನೆ ಮುರಿದು ಕೈಲಿ ಬಂತು. ಇನ್ನೊಂದು ಬದಿಯಿಂದ ಇನ್ನೊಂದು ಎಲೆಯನ್ನು ಬಗ್ಗಿಸಿ ನೋಡಿದರು: "ಹೀಗೆ ಮುರಿದದ್ದು ಒಳ್ಳೇ ಬಸಳೆ. ಬರೇ ಬಗ್ಗಿದ್ದನ್ನು ಹಾಗೇ ಬಿಡಬೇಕು. ಇಷ್ಟು ನಿನಗೆ ತಿಳಿಯಬಾರದೆ? ತೊಪ್ಪಲು ಪಲ್ಯಕ್ಕೆ ಪರೀಕ್ಷೆ ಇದೇ. ಇನ್ನು ಹೀಗೆ ಬಂದು ನನ್ನ ಕಾಡಬೇಡ."

ಮೀರಾಬಹನರಿಗೆ ಏನುಹೇಳಲೂ ಅವಕಾಶವೇ ಸಿಗಲಿಲ್ಲ. ಅವರು ಬೆವತು ಹೋದರು. ಉತ್ತರ ಕೊಡುವುದು ಸಾಧ್ಯವಿದ್ದಿಲ್ಲ: ಏಕೆಂದರೆ ಕೊಟ್ಟರೆ ಕೇಳುವವರಿದ್ದಿಲ್ಲ.

ಈ ನಿರ್ಮಮ ವ್ಯವಹಾರ ಸರ್ವಾಧಿಕಾರವಾಗಿರಲಿಲ್ಲ; ಅದಕ್ಕೂ ಉನ್ನತವಾದ ಶಾಸನವಾಗಿತ್ತದು. ಅದು ಸಾಮಾಜಿಕ ಇಲ್ಲವೇ ಬೇರೆ ತಾರತಮ್ಯದಿಂದಾಗಿ ವ್ಯಕ್ತಿ ವ್ಯಕ್ತಿಗಳಲ್ಲಿ ಉಂಟಾಗುವ ಭಿನ್ನತೆಯಿಂದ ಬಂದ ಶಾಸನವಲ್ಲ. ಅದರಲ್ಲಿ ನಿರ್ವ್ಯಯಕ್ತಿಕವಾದ ನಿರುಪಾಯತೆ ಇರಲಿಲ್ಲ; ಇಕ್ಕಡೆಗಳಿಗೂ ಒಪ್ಪಿತವಾದದ್ದಾಗಿತ್ತು; ಪ್ರೇಮ ಮೂಲಕವಾಗಿತ್ತು ಮತ್ತು ಅನಿರ್ಬಂಧವಾಗಿದ್ದುದರಿಂದಲೇ ಅದು ಅನುಲ್ಲಂಘ್ಯವಾಗಿತ್ತು.

(ಸಾಭಾರ :ಅಕಾಲ ಪುರುಷ ಹಿಂದಿ ಗ್ರಂಥ)

ಗಾಂಧಿ ಸಾಹಿತ್ಯ ಓದಬೇಕೆಂಬ ಶಿಕ್ಷೆ!

ನ್ಯಾಯಾಲಯವು ತಪ್ಪಿತಸ್ಥರಿಗೆ ಅನೇಕ ಬಗೆಯ ಶಿಕ್ಷೆಗಳನ್ನು ಕೊಡುವುದನ್ನು ತಿಳಿದಿದ್ದೇವೆ ಗಾಂಧೀ ಸಾಹಿತ್ಯವನ್ನು ಓದಬೇಕೆಂಬ ಶಿಕ್ಷೆ ನ್ಯಾಯಸ್ಥಾನವೊಂದು ಕೊಟ್ಟಿರುವುದು ವಿಚಿತ್ರವಾದರೂ ಸತ್ಯ ಸಂಗತಿಯಾಗಿದೆ. ಮದ್ರಾಸ್ ಉಚ್ಚ ನ್ಯಾಯಾಲಯದ ಎಂ.ಕರ್ಪಗವಿನಾಯಗಮ್ ಎಂಬ ನ್ಯಾಯಾಧೀಶರು ತಾವು ಕೊಟ್ಟ ತೀರ್ಮಾನವೊಂದನ್ನು ಸಮರ್ಥಿಸಿಕೊಂಡಿದ್ದಾರೆ. ಅವರ ತೀರ್ಮಾನದ ಪ್ರಕಾರ ತಮಿಳುನಾಡು ಅಸೆಂಬ್ಲಿಯ ಒಬ್ಬ ಶಾಸಕ ಕಡ್ಡಾಯವಾಗಿ ಗಾಂಧೀಜಿಯವರ ಆತ್ಮಚರಿತ್ರೆಯಾದ 'ಸತ್ಯದೊಂದಿಗೆ ನನ್ನ ಪ್ರಯೋಗಗಳು' ಎಂಬ ಪುಸ್ತಕವನ್ನು ಓದಬೇಕಾಗಿದೆ. ನ್ಯಾಯಮೂರ್ತಿ ಕರ್ಪಗವಿನಾಯಗಮ್ ಪ್ರಕಾರ ಆ ಶಾಸಕ ಒಂದು ದುಷ್ಕಾರ್ಯಕ್ಕೆ ಸಂಬಂಧಿಸಿದ ವಿಷಯದಲ್ಲಿ ಅಪರಾಧಿಯಾಗಿದ್ದ. ತನ್ನ ಅಪರಾಧಕ್ಕಾಗಿ ಪಶ್ಚಾತ್ತಾಪ ಪಡಬೇಕೆಂದು ಮತ್ತು ತನ್ನನ್ನು ತಾನು ತಿದ್ದಿಕೊಳ್ಳಬೇಕೆಂದು ಕರ್ಪಗವಿನಾಯಗಮ್ ಆ ಶಾಸಕನು ಆತ್ಮ ಚರಿತ್ರೆಯ ಒಂದು ಪ್ರತಿಯನ್ನು ಖರೀದಿಸತಕ್ಕದ್ದು ಮತ್ತು ಅದನ್ನು ಓದತಕ್ಕದೆಂದು ತಾವು ಆದೇಶಿಸಿದ್ದಾಗಿ ಹೇಳಿದರು. ಅಲ್ಲದೆ ಇಂತಿಷ್ಟು ದಿನಗಳವರೆಗೆ ಗಾಂಧಿ ಸಾಹಿತ್ಯವನ್ನು ಗ್ರಂಥಾಲಯದಲ್ಲಿ ಕುಳಿತು ಓದಬೇಕೆಂದು ಸಹ ಆದೇಶಿಸಿದ್ದಾಗಿ ಅವರು ಹೇಳಿದರು. ಈ ತೀರ್ಮಾನವನ್ನು ಇನ್ನು ಬೇರೆ ಯಾವುದೇ ಪ್ರಕಾರದ ಶಿಕ್ಷೆಗೆ ಗುರಿಪಡಿಸದೆ ಕೊಟ್ಟದ್ದಾಗಿ ಅವರು ಹೇಳಿದರು. ಗಾಂಧೀಜಿಯವರ ಆತ್ಮಕಥೆಯನ್ನು ಖರೀದಿಸಿದ್ದುದರ ದಾಖಲೆಗಾಗಿ ಚೆನ್ನೈನಲ್ಲಿರುವ ಹಿಗ್ಗಿನ್ ಬೊಥೆಮ್ಸ್ ಪುಸ್ತಕದಂಗಡಿಯ ರಸೀತಿಯನ್ನು ಸಲ್ಲಿಸುವಂತೆ ಶಾಸಕನಿಗೆ ತಿಳಿಸಲಾಗಿತ್ತು. ತಮ್ಮ ಈ ತೀರ್ಮಾನವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿಸಬಹುದು. ಯಾವುದೇ ಒಬ್ಬ ವ್ಯಕ್ತಿಯು ನವನಿರ್ಮಿತಿಕಾರನಾಗುವುದರ ಜೊತೆಗೆ ಮಾರ್ಗ ನಿರ್ಮಿಸುವವನೂ ಆಗಿರಬೇಕು. ಅವನು ತನ್ನ ಆತ್ಮಸಾಕ್ಷಿಗೆ ಬದ್ಧನಾಗಿರಬೇಕು ಮಹಾತ್ಮ ಗಾಂಧೀಜಿಯವರ ಜೀವನಚರಿತ್ರೆ ಯಾರು ಬೇಕಾದರೂ ತಾನಿರುವ ಪರಿಸ್ಥಿತಿಯಿಂದ ಮೇಲೆ ಬರಬಹುದು. ಯಾವುದೂ ಅಸಾಧ್ಯವಲ್ಲ ಎಂದು ಕಲಿಸುತ್ತದೆ.

ಕರ್ಪಗವಿನಾಯಗಮ್ ಈ ವಿಷಯವನ್ನು ನಿಜಲಿಂಗಪ್ಪ ಸ್ಮಾರಕ ಉಪನ್ಯಾಸದ ಸಂದರ್ಭದಲ್ಲಿ ತಿಳಿಸಿದರು.

* * *

ವಯಸ್ಸು ಇಪ್ಪತ್ತು, ಚಿತ್ರ ಮಾತ್ರ ಮಹಾತ್ಮನದು

ಮಹಾತ್ಮಗಾಂಧಿಯವರ ಬಗ್ಗೆ ಚಲನಚಿತ್ರವನ್ನು ತಯಾರಿಸಿದಂಥ ವಿಶ್ವದಲ್ಲಿಯೆ ಅತ್ಯಂತ ಚಿಕ್ಕವಯಸ್ಸಿನವನು ಇವನಾಗಿರಬಹುದು. ಅದೇ ರೀತಿ ೨೦೦೫ರಲ್ಲಿ ಮೆಲ್ಬೋರ್ನ್ ಚಲನಚಿತ್ರೋತ್ಸವ ಮತ್ತು ಫ್ರಾನ್ಸ್‌ನಲ್ಲಿಯ ಹೈಪೆಸ್ಟ್ ಚಲನಚಿತ್ರೋತ್ಸವದಲ್ಲಿ ಹತ್ತು ನಿಮಿಷದ ಅವಧಿಯ ಚಿತ್ರವನ್ನು ಪ್ರದರ್ಶಿಸುವ ಅತ್ಯಂತ ಚಿಕ್ಕ ವಯಸ್ಸಿನವನು ಇವನಾಗಿರಬಹುದು. ಈ ಯುವಕನ ಹೆಸರು ಭವಿನ್‌ತ್ರಿವೇದಿ. ಇವನು ಮೆಲ್ಬೋರ್ನ್‌ದಲ್ಲಿರುವ ಎಸ್.ಎ.ಇ. ತಾಂತ್ರಿಕ ಕಾಲೇಜಿನಲ್ಲಿ ಡಿಜಿಟಲ್ ಫಿಲ್ಮ್ ತಯಾರಿಕಾ ವಿದ್ಯಾರ್ಥಿಯಾಗಿದ್ದಾನೆ. ತ್ರಿವೇದಿ ತಯಾರಿಸಿರುವ ಚಲನಚಿತ್ರದ ಹೆಸರು "ಭಾರತದ ಶಕ್ತಿ". ಈ ಚಿತ್ರವು ಮಹಾತ್ಮಗಾಂಧಿಯವರ ಬಾಲ್ಯದ ದಿನಗಳು, ದಕ್ಷಿಣ ಆಫ್ರಿಕಾದಲ್ಲಿಯ ಅವರ ಜೀವನ, ದಾಂಡಿಯಾತ್ರೆ ಮತ್ತು ಅವರು ನೇತೃತ್ವವಹಿಸಿದ್ದ ಸ್ವಾತಂತ್ರ್ಯಚಳುವಳಿ ಕುರಿತಾಗಿದೆ.

ಭವಿನ್ ತ್ರಿವೇದಿ ರಾಜ್‌ಕೋಟ್‌ನವನು. ಅವನು ಈ ಚಲನಚಿತ್ರ ತಯಾರಿಕೆಗಾಗಿ ೫ ತಿಂಗಳು ಕಷ್ಟಪಟ್ಟಿದ್ದಾನೆ. ಪ್ರತಿ ದಿನ ಅವನು ಸುಮಾರು ೧೦ ರಿಂದ ೧೨ ಗಂಟೆಗಳ ಕಾಲ ಶ್ರಮಪಟ್ಟಿದ್ದಾನೆ. ಅವನು ಕಾಲಕ್ರಮೇಣ ಮಹಾತ್ಮರ ಬಗ್ಗೆ ೩ ಗಂಟೆ ಅವಧಿಯ ಚಿತ್ರವನ್ನು ತಯಾರಿಸುವ ಆಸೆಯನ್ನಿರಿಸಿಕೊಂಡಿದ್ದಾನೆ. ಗಾಂಧಿಯೆ ಏಕೆ? ಎಂದು ಅವನನ್ನು ಪ್ರಶ್ನಿಸಿದರೆ ಅವನ ಉತ್ತರ ಹೀಗಿದೆ "ಎಲ್ಲ ಯುಗಗಳ ಜನರಿಗೆ ಮತ್ತು ಮುಂದಿನ ಎಲ್ಲ ವಯಸ್ಸಿನವರಿಗೆ ಗಾಂಧಿ ಪ್ರೇರಣೆಯ ಮೂಲವಾಗಿ ಉಳಿಯುವರು". ತಾನು ತಯಾರಿಸಿದ ಚಿತ್ರವು ಮಕ್ಕಳನ್ನು ಉತ್ಸಾಹಭರಿತರನ್ನಾಗಿ ಮಾಡಬಹುದೆಂದು ಅವನು ಆಶಿಸಿದ್ದಾನೆ. ತ್ರಿವೇದಿಯ ಆ ಚಿತ್ರ ತಯಾರಿಸಲು ೪೦,೦೦೦ ರೂಪಾಯಿಗಳಷ್ಟು ಖರ್ಚು ಮಾಡಿದ್ದಾನೆ. ಅವನ ಪ್ರಕಾರ ಈ ಖರ್ಚು ಪ್ರಮುಖವಾದುದಲ್ಲ. ಮುಖ್ಯವಾದ ವಿಷಯವೇನೆಂದರೆ ರಾಷ್ಟ್ರಪಿತನ ಬಗ್ಗೆ ಚಿತ್ರ ತಯಾರಿಸುವಾಗ ಉಂಟಾಗುವ ರೋಮಾಂಚನ. ಮೆಲ್ಬೋರ್ನ್ ಚಿತ್ರೋತ್ಸವದಲ್ಲಿ ತ್ರಿವೇದಿಯ ಚಿತ್ರವು ಕಲಾಚಿತ್ರ ವಿಭಾಗದಲ್ಲಿ ಪ್ರದರ್ಶಿತಗೊಂಡಿತು. *

ಗಾಂಧಿ ಮತ್ತು ಗಾಂಧಿ ವಿಚಾರ

ಗಾಂಧೀಜಿಯವರ ವಿಚಾರ ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಿತು. ದೇಶವನ್ನು ಆಧುನಿಕ ಜಾತ್ಯತೀತ ರಾಷ್ಟ್ರವನ್ನಾಗಿ ನಿರ್ಮಿಸಿತು. ಆದರೆ ನಮ್ಮಲ್ಲಿಯ ಎಷ್ಟು ಜನರು ನಿಜವಾಗಿಯೂ ಗಾಂಧೀ ವಿಚಾರದ ಪರಿಚಯವನ್ನು ಹೊಂದಿದ್ದಾರೆ. ಇಂದು ಗಾಂಧೀ ವಿಚಾರ ಎಷ್ಟು ಪ್ರಸ್ತುತ ಎಂಬುದನ್ನು ಎಷ್ಟು ಜನ ಅರಿತಿದ್ದಾರೆ ಎಂಬ ಈ ಪ್ರಶ್ನೆಗೆ ಉತ್ತರವನ್ನು ನೀವು ಗಾಂಧಿ ಶಾಂತಿ ಪ್ರತಿಷ್ಠಾನದಲ್ಲಿ ಪಡೆಯಬಹುದು. ಪ್ರತಿಷ್ಠಾನವು ಗಾಂಧೀ ವಿಚಾರ ಆಧಾರಿತ ಅನೇಕ ವಿಧವಾದ ಪ್ರಮಾಣೀಕೃತ ಪಾಠಗಳ ಸರಣಿಯನ್ನು ಏರ್ಪಡಿಸಿದೆ. ಉದಾಹರಣೆಗೆ ನೀತಿಶಾಸ್ತ್ರ, ಶಾಂತಿ ಮತ್ತು ಸಮಾಜಕಲ್ಯಾಣ ಇಂಥ ವಿಷಯಗಳ ಕುರಿತಾದ ಪಾಠ ಸರಣಿಗಳ ಮೂಲಕ ನೀವು ಗಾಂಧಿಯನ್ನು ಮರುಶೋಧಿಸಬಹುದು. ಈ ಪಾಠಗಳ ಸರಣಿ ದುಬಾರಿಯಿಲ್ಲ. ಶಾಲಾ ವಿದ್ಯಾರ್ಥಿಗಳಿಗಾಗಿ ಈ ಕೆಳಗಿನ ಪಠ್ಯಸರಣಿಗಳು ೧೫ ರೂಗಳಿಗೆ ಒಂದರಂತೆ ದೊರೆಯುತ್ತದೆ:- ಮಕ್ಕಳಿಗಾಗಿ ಗಾಂಧಿ, ನಾಲ್ಕನೇ ತರಗತಿಗಾಗಿ; ಶಾಂತಿಗಾಗಿ ಗಾಂಧಿ, ಐದನೆ ತರಗತಿಗೆ; ವಿದ್ಯಾರ್ಥಿಯಾಗಿ ಗಾಂಧಿ, ಆರನೆ ತರಗತಿಗೆ; ವಕೀಲನಾಗಿ ಗಾಂಧಿ, ಏಳನೆ ತರಗತಿಗೆ; ಸತ್ಯಾಗ್ರಹಿಯಾಗಿ ಗಾಂಧಿ ಎಂಟನೆ ತರಗತಿಗೆ; ರಚನಾತ್ಮಕ ಕಾರ್ಯಕರ್ತನಾಗಿ ಗಾಂಧಿ ಒಂಭತ್ತು ಮತ್ತು ಹತ್ತನೆ ತರಗತಿಗಳಿಗಾಗಿ; ವೈದ್ಯನಾಗಿ ಗಾಂಧಿ ಹನ್ನೊಂದು ಮತ್ತು ಹನ್ನೆರಡನೆ ತರಗತಿಗಳಿಗಾಗಿ;

ಕಾಲೇಜು ವಿದ್ಯಾರ್ಥಿಗಳಿಗಾಗಿರುವ ಪಠ್ಯಸರಣಿಯೊಂದರ ಬೆಲೆ ಇಪ್ಪತ್ತು ರೂಪಾಯಿ ಅಧ್ಯಾಪಕರಿಗೆ ಒಂದರ ಬೆಲೆ ಮೂವತ್ತು ರೂಪಾಯಿ.

ಪ್ರವೇಶದ ನಿಯಮ:-

ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ತಮ್ಮ ಶಾಲೆ ಮತ್ತು ಕಾಲೇಜುಗಳ ಮೂಲಕ ನೊಂದಾಯಿಸಿಕೊಳ್ಳಬಹುದು. ಪಠ್ಯ ಪುಸ್ತಕಗಳು ಮತ್ತು ಇತರೆ ಸಂಪನ್ಮೂಲ ವಿಷಯವು ಇಂಗ್ಲೀಷ್‌ನಲ್ಲಿದೆ. ಅದನ್ನು ಅಂಚೆ ಮೂಲಕ ಕಳುಹಿಸಲಾಗುವುದು. ಈ ಪಠ್ಯ ಸರಣಿಯ ಉದ್ದೇಶ ಗಾಂಧಿ ಸಿದ್ಧಾಂತ ಮತ್ತು ಗಾಂಧಿ ವಿಚಾರವನ್ನು ತಿಳಿಯುವುದಕ್ಕಾಗಿದೆ. ಆಸಕ್ತವಿರುವವರು ತಮ್ಮ ಶುಲ್ಕಗಳನ್ನು ಮನಿಯಾರ್ಡರ್ ಮೂಲಕ ಕಳುಹಿಸಬಹುದು. ಅಂಚೆ ಖರ್ಚಿಗಾಗಿ ಹೆಚ್ಚುವರಿ ೨೦ ರುಪಾಯಿಗಳನ್ನು ಕಳುಹಿಸಬೇಕು ಬ್ಯಾಂಕ್ ಡಿ.ಡಿ.ಮೂಲಕ ಕಳುಹಿಸುವುದಾದರೆ ಅದನ್ನು ಗಾಂಧಿ ಶಾಂತಿ ಪ್ರತಿಷ್ಠಾನ (Gandhi peace Foundation) ಎಂಬ ಹೆಸರಿನಲ್ಲಿ ಕಳುಹಿಸಬೇಕು. ಹೆಚ್ಚಿನ ವಿವರಗಳಿಗಾಗಿ (044 - 24993839 ಅಥವಾ 94444 27209 ಅಥವಾ gpf madras@yahoo.co.in web site : www.gandhi peace foundation madras.org.in) ಸಂಪರ್ಕಿಸಬಹುದು *

ವಾಲ್ಡೇನ್‌ನಿಂದ ವಾರ್ಧಕ್ಕೆ

✍ ಎ.ರಂಗರಾಜನ್

೧೯೦೬ ಸೆಪ್ಟೆಂಬರ್ ೧೧ ಅಸಾಧಾರಣವಾದ ರಾಜಕೀಯ ಘಟನೆ ಸಂಭವಿಸಿದ ದಿನ. ಆ ದಿನದಂದು ಗಾಂಧೀಜಿ ದಕ್ಷಿಣ ಆಫ್ರಿಕಾದಲ್ಲಿ ಏಷ್ಯಾಟಿಕ್ ರಿಜಿಸ್ಟ್ರೇಷನ್ ಆ್ಯಕ್ಟ್ ವಿರುದ್ಧ ಎಂಪಾಯರ್ ಥಿಯೆಟರ್‌ನಲ್ಲಿ ತಮ್ಮ ಸುಪ್ರಸಿದ್ಧ ಭಾಷಣ ಮಾಡಿದರು. ಅನ್ಯಾಯಪೂರ್ಣವಾದ ವರ್ಣಭೇದ ನೀತಿಯ ವಿರುದ್ಧ ಸವಿನಯ ಪ್ರತಿರೋಧವನ್ನು ಮಾಡಬೇಕೆಂದು ಅಲ್ಲಿ ಸೇರಿದ್ದ ಭಾರತೀಯರನ್ನು ಗಾಂಧೀ ಒತ್ತಾಯಿಸಿದರು. ಹೀಗೆ 'ಸತ್ಯಾಗ್ರಹ' ಹುಟ್ಟಿತು. ರಾಜಕೀಯ ಶಬ್ದಕೋಶದಲ್ಲಿ ಇದುವರೆಗೆ ಇಲ್ಲದಿದ್ದಂಥ ವಿಶಿಷ್ಟ ರಚನಾತ್ಮಕ ಹೋರಾಟ ಹುಟ್ಟಿಕೊಂಡಿತು. ೧೯೦೭ರಲ್ಲಿ ಒಂದು ವರ್ಷದ ನಂತರ ಗಾಂಧೀಜಿ ತಮ್ಮ ಅನೇಕ ಕಾರಾಗೃಹ ಶಿಕ್ಷೆಗಳಲ್ಲಿ ಮೊದಲ ಶಿಕ್ಷೆಯನ್ನು ಅನುಭವಿಸುತ್ತಿದ್ದಾಗ ಥೋರೊರ "ನಾಗರೀಕ ವಿಧೇಯತೆ" ಎಂಬ ವಿಷಯದ ಮೇಲೆ ಬರೆದಿದ್ದ ಮಹಾ ಪ್ರಬಂಧವನ್ನು ಓದಿದರು. ಥೋರೊ ೧೯ನೇ ಶತಮಾನದ ನಾಗರಿಕ ಹಕ್ಕುಗಳ ಸುಪ್ರಸಿದ್ಧ ಹೋರಾಟಗಾರ, ಪರಿಸರವಾದಿ ಮತ್ತು ಚಿಂತಕ. ಥೋರೋನ ಆ ಪ್ರಬಂಧದಿಂದ ಗಾಂಧೀ ಬಹಳ ಪ್ರಭಾವಿತಗೊಂಡು ದಕ್ಷಿಣ ಆಫ್ರಿಕಾದಲ್ಲಿ ತಾವು ಸಂಪಾದಿಸುತ್ತಿದ್ದ 'ಇಂಡಿಯನ್ ಒಪಿನಿಯನ್' ಪತ್ರಿಕೆಯಲ್ಲಿ ತಕ್ಷಣ ಬರೆದರು. ಗಾಂಧೀಜಿ ಥೋರೊರಿಂದ ಬಹಳೆ ಪ್ರಭಾವಿತರಾದರು. ಅವರ ಸಾಹಿತ್ಯವನ್ನು ಓದಿದರು. ತಮ್ಮ ಲೇಖನಗಳಲ್ಲಿ ಅವರ ಮಾತುಗಳನ್ನು ಉದ್ಧೃತಿಸುತ್ತಿದ್ದರಲ್ಲದೆ ಪ್ರತಿಯೊಬ್ಬರೂ ಆ ಸಾಹಿತ್ಯವನ್ನು ಓದಬೇಕೆಂದು ಶಿಫಾರಸ್ಸು ಮಾಡಿದರು. ಗಾಂಧೀಜಿಯವರ ಮೇಲಣ ಥೋರೊರವರ ಈ ಪ್ರಭಾವವು ಸಹಜವಾದುದೇ ಅಥವಾ ಸಮವೈಚಾರಿಕತೆಯ ಕಾರಣದಿಂದಾಗಿಯೆ ಎಂಬ ಬಗ್ಗೆ ಬಹಳಷ್ಟು ಜಿಜ್ಞಾಸಾ ಸಾಹಿತ್ಯ ಬಂದಿದೆ. ಗಾಂಧೀಜಿ ಸ್ವಯಂ ಅನುಸರಿಸಿದ ದಾರಿಯನ್ನು ಥೋರೊ ಬಲಗೊಳಿಸಿದರೆಂಬುದಾಗಿ ಸಾಮಾನ್ಯ ಅಭಿಮತವಿದೆ. ನಮ್ಮ ಕಾಲದ ಇಬ್ಬರು ಶ್ರೇಷ್ಠ ನೀತಿ ಪ್ರತಿಪಾದಕರು ಏಕರೀತಿಯಾಗಿ ಆಲೋಚಿಸುತ್ತಿದ್ದರೆಂಬುದು ಇಲ್ಲಿ ಮುಖ್ಯವಾದ ಸಂಗತಿಯಾಗುತ್ತದೆ. ಅವರಿಬ್ಬರೂ ವ್ಯಕ್ತಿಸ್ವಾತಂತ್ರ್ಯದಲ್ಲಿ, ಅಂತಃಸಾಕ್ಷಿಯಲ್ಲಿ ಮತ್ತು ಮಾನವನ ಅಂತರ್ನಿಹಿತ ಒಳ್ಳೆಯತನದಲ್ಲಿ

ವಿಶ್ವಾಸವಿಟ್ಟಿದ್ದರು.

ಥೋರೊನ ಕಾಲದಲ್ಲಿಯ ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ಆಚರಣೆಯಲ್ಲಿದ್ದ ಗುಲಾಮಗಿರಿ ಪದ್ಧತಿಯ ವಿರುದ್ಧ ತೀವ್ರತರವಾದ ಬಂಡಾಯದ ಆಸ್ಫೋಟನೆಯ ಸಂದರ್ಭದಲ್ಲಿ ಥೋರೊ ತನ್ನ ವಿಚಾರಗಳನ್ನು ಬೆಳಸಿಕೊಂಡಿದ್ದನ. ಆ ವಿಚಾರಗಳ ಪ್ರಕಾರ ರಾಜ್ಯಶಕ್ತಿಯನ್ನು ಉಲ್ಲಂಘಿಸುವುದು ನ್ಯಾಯ ಬದ್ಧವಾದುದಾಗಿತ್ತು. ಏಕೆಂದರೆ ವರ್ಣಭೇದ ನೀತಿಯ ಆಚರಣೆಯಲ್ಲಿ ರಾಜ್ಯದ ಪಾತ್ರ ಸ್ಪಷ್ಟವಾಗಿದ್ದಿತು. ಥೋರೊ ಸರ್ಕಾರಕ್ಕೆ ತೆರಿಗೆಗಳನ್ನು ಕೊಡಲು ನಿರಾಕರಿಸಿದನು ಗುಲಾಮಗಿರಿ ಉಚ್ಛ್ರಾಂಯ ಸ್ಥಿತಿಯಲ್ಲಿದ್ದ ಟೆಕ್ಸಾಸ್ ರಾಜ್ಯವನ್ನು ಆಕ್ರಮಿಸಿಕೊಳ್ಳುವುದಕ್ಕೊಸ್ಕರ ಮೆಕ್ಸಿಕೊ ವಿರುದ್ಧ ಸರ್ಕಾರ ಯುದ್ಧವನ್ನು ಹೂಡುವುದರ ಆಲೋಚನೆಯನ್ನು ವಿರೋಧಿಸಬೇಕೆಂಬುದೇ ತೆರಿಗೆ ನಿರಾಕರಣೆಯ ಉದ್ದೇಶವಾಗಿದ್ದಿತು. ಟೆಕ್ಸಾಸ್ ರಾಜ್ಯದ ಆಕ್ರಮಣ ಸಾಧ್ಯವಾದ ಪಕ್ಷದಲ್ಲಿ ಆ ಆಕ್ರಮಣವು ಉತ್ತರಭಾಗದಲ್ಲಿ ಗುಲಾಮಗಿರಿ ರದ್ಧತಿಯ ಪರವಾಗಿದ್ದವರ ವಿರುದ್ಧ ದಾಕ್ಷಿಣಾತ್ಯರ ಬಲವನ್ನು ಹೆಚ್ಚಿಸಿದಂತಾಗುತ್ತಿತ್ತು. ಶ್ರೀಮಂತ ಮತ್ತು ಪಟ್ಟಭದ್ರಹಿತಾಸಕ್ತಿಗಳು ತಮ್ಮ ಸ್ವಾರ್ಥಪೂರ್ಣ ಲಾಭಕ್ಕಾಗಿ ಪ್ರಭುತ್ವವನ್ನು ತಮ್ಮ ಇಚ್ಛಾನುಸಾರ ಬಳಸಿಕೊಳ್ಳುತ್ತಿವೆ ಎಂಬ ಬಗ್ಗೆ ಥೋರೋನಿಗೆ ಮನದಟ್ಟಾಗಿತ್ತು. ಆದ್ದರಿಂದ ಅನ್ಯಾಯಪೂರಿತ ಕಾನೂನುಗಳನ್ನು ಪಾಲಿಸುವುದಕ್ಕಿಂತ ಅಂತಃಸಾಕ್ಷಿಯ ಆದೇಶಗಳನ್ನು ಪಾಲಿಸುವುದೇ ಹೆಚ್ಚು ಮಹತ್ವದ್ದೆಂದು ಥೋರೋ ಭಾವಿಸಿದ. ಮೊದಲು ನಾವು ಮಾನವರಾಗಿ ನಂತರ ಪ್ರಜೆಗಳಾಗಬೇಕು ಎಂಬುದಾಗಿ ಅವನು ಬರೆಯುತ್ತಿದ್ದ. ೧೮೪೬ರಲ್ಲಿ ತೆರಿಗೆಗಳನ್ನು ಕೊಡಲು ನಿರಾಕರಿಸಿದ್ದಕ್ಕಾಗಿ ಕಾರಾಗೃಹಕ್ಕೆ ತಳ್ಳಲ್ಪಟ್ಟನು. ವ್ಯಕ್ತಿಯ ಅಂತಃಸಾಕ್ಷಿಯನ್ನು ಅಡಗಿಸುವ ಪ್ರಭುತ್ವದ ಪ್ರಯತ್ನದ ವಿರುದ್ಧ ಥೋರೊ ಹೀಗೆ ಬರೆದನು, "ಎಲ್ಲಿಯವರೆಗೆ ಪ್ರಭುತ್ವ ವ್ಯಕ್ತಿಯನ್ನು ಉನ್ನತವೂ, ಸ್ವತಂತ್ರವೂ ಆದ ಶಕ್ತಿಯೆಂದು ಪರಿಗಣಿಸುವುದಿಲ್ಲವೋ ಮತ್ತು ಯಾವನಿಂದ ತನ್ನೆಲ್ಲ ಬಲ ಮತ್ತು ಅಧಿಕಾರ ಬಂದಿದೆಯೆಂದು ಭಾವಿಸುವುದಿಲ್ಲವೋ ಮತ್ತು ಅವನನ್ನು ಆ ರೀತಿ ನಡೆಸಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ನಿಜವಾದ ಸ್ವತಂತ್ರವೂ ಸುಸಂಸ್ಕೃತವೂ ಆದ ಪ್ರಭುತ್ವ ಇರಲು ಸಾಧ್ಯವಿಲ್ಲ". ಥೋರೊ ಗುಲಾಮರ ಸ್ವಾತಂತ್ರ್ಯಕ್ಕಾಗಿ ತನ್ನ ಹೋರಾಟವನ್ನು ಮುಂದುವರೆಸಿದ ಮತ್ತು ಬಂಧನದಲ್ಲಿದ್ದ ಗುಲಾಮರ ಬಿಡುಗಡೆಯ ಹೋರಾಟಗಳಲ್ಲಿ ಬಹಳ ತನ್ಮಯತೆಯಿಂದ ತನ್ನನ್ನು ತೊಡಗಿಸಿಕೊಂಡ. ಕಾರಾಗೃಹದಲ್ಲಿ ಥೋರೊ ತಾನು ಸವೆಸಿದ ರಾತ್ರಿಯನ್ನು

ಸ್ಮರಿಸಿಕೊಳ್ಳುತ್ತಾ ಉನ್ನತಮಟ್ಟದ ಕರ್ತವ್ಯವನ್ನು ತಾನು ನಿರ್ವಹಿಸಿದ್ದುದಾಗಿ ವರ್ಣಿಸಿಕೊಂಡಿದ್ದಾನೆ. ಅವನು ಮುಂದುವರೆಯುತ್ತಾ ಬರೆದ ಮಾತುಗಳು ಇಂತಿವೆ; "ಒಂದೇ ಒಂದು ನಿಮಿಷ ಕಲ್ಲು ಇಟ್ಟಿಗೆಗಳ ಗೋಡೆಗಳ ಮಧ್ಯೆ ನಾನು ಬಂಧಿಯಾಗಿದ್ದೆನೆಂದೆನಿಸಲಿಲ್ಲ. ಊರಿನಲ್ಲಿಯ ಬೇರೆಲ್ಲ ಜನರಿಗಿಂತ ನಾನೊಬ್ಬನೆ ತೆರಿಗೆಯನ್ನು ಸರಿಯಾಗಿ ಸಂದಾಯಮಾಡಿದ್ದೇನೆಂದೆನಿಸಿತು". ಗಾಂಧೀಜಿ ತಮ್ಮ ಕಾರಾಗೃಹದ ಶಿಕ್ಷೆಯನ್ನು ಅನುಭವಿಸುತ್ತಿದ್ದಾಗ ಥೋರೊನ ಈ ಮಾತುಗಳನ್ನು ಜ್ಞಾಪಿಸಿಕೊಂಡಿದ್ದರು.

ಥೋರೊನ ಬರಹಗಳು ಮತ್ತು ಭಾಷಣಗಳಲ್ಲಿಯ ದೂರದರ್ಶಿತ್ವ ಮತ್ತು ಸ್ಪಷ್ಟ ವಿಚಾರಗಳಿಂದ ಬಹಳಷ್ಟು ಜನರು ಪ್ರಭಾವಿತರಾದರು. ಅದರಿಂದಾಗಿ ಅವನಿಗೆ ಅಮೇರಿಕಾದ ಸಾಹಿತ್ಯದಲ್ಲಿ ಅಮರ ಸ್ಥಾನವು ದೊರಕಿತು. ಥೋರೊ ಅಪಾರವಾದ ಸಾಹಿತ್ಯವನ್ನು ರಚಿಸಿಹೋಗಿದ್ದಾನೆ. ಅವನ ಸಾಹಿತ್ಯಕೃಷಿ ೨೪ ವರ್ಷಗಳ ಕಾಲ ನಡೆದಿದೆ. ಆ ಸಾಹಿತ್ಯವು ೩೯ ಸಂಪುಟಗಳಿಗಾಗುವಷ್ಟು ಇದೆ. ಅವುಗಳಲ್ಲಿ ಅತಿ ಹೆಚ್ಚು ಓದುಗರನ್ನು ಪಡೆದ ಪುಸ್ತಕ ವಾಲ್ಡೇನ್. ಆ ಪುಸ್ತಕದಲ್ಲಿ ಅವನು ಕಾಡಿನಲ್ಲಿ ಕಳೆದಿದ್ದ ಎರಡು ವರ್ಷ, ಎರಡು ತಿಂಗಳು ಮತ್ತು ಎರಡು ದಿನಗಳ ಅವಧಿಯ ಅನುಭವಗಳ ಕುರಿತಾದ ವಿಚಾರವಿದೆ. ಆ ಸಮಯದಲ್ಲಿ ಅವನು ಕಾಡಿನಲ್ಲಿ ಒಂದು ಕೋಣೆಯಷ್ಟೇ ಅಳತೆಯ ಮರದಕೋಣೆಯೊಂದನ್ನು ತನ್ನ ಸ್ವಂತ ಕೈಗಳಿಂದ ವಾಲ್ಡೇನ್ ಸರೋವರದ ಬಳಿ ಕಟ್ಟಿದ. ಇದು ಮೆಸೆಚುಸೆಟ್ಸ್ ರಾಜ್ಯದಲ್ಲಿ ಬೋಸ್ಟನ್ ಬಳಿಯಿದೆ. ಆ ಮರದ ಕೋಣೆಯಲ್ಲಿ ಥೋರೊ ತುಂಬ ಗಂಭೀರಸ್ವರೂಪದ ಸರಳ ಜೀವನವನ್ನು ನಡೆಸಿದ. ಅದು ಅವನ ಆಧ್ಯಾತ್ಮಿಕ ಸಾಹಸದ ದೀರ್ಘಪಯಣವೂ ಆಗಿತ್ತು, ಸತ್ಯದೊಂದಿಗಿನ ದೊಡ್ಡ ಪ್ರಯೋಗವೂ ಆಗಿತ್ತು. ಥೋರೊ ಪ್ರಕೃತಿಯನ್ನು ಅತ್ಯಂತ ಆತ್ಮೀಯವಾಗಿ ಅನುಭವಿಸ ಬಯಸಿದ್ದನು. ಅವನದೆ ಮಾತುಗಳಲ್ಲಿ ಹೇಳುವುದಾದರೆ "ಜೀವನದ ಅತ್ಯಗತ್ಯ ಸಂಗತಿಗಳೊಂದಿಗೆ ಮುಖಾಮುಖಿಯಾಗಿರಲು ಬಯಸಿದೆ. ಜೀವನ ಏನು ಕಲಿಸಬಯಸುತ್ತದೆಯೋ ಅದನ್ನು ನಾನು ಕಲಿಯಬಲ್ಲೆನೆ ಹೇಗೆ ಎಂಬುದನ್ನು ತಿಳಿಯಬಯಸಿದ್ದೆ. ನಾನು ಸಾಯುವ ವೇಳೆಯಲ್ಲಿ ನಿಜವಾದ ಜೀವನವನ್ನು ನಡೆಸಿಲ್ಲವೆಂಬುದನ್ನು ಕಂಡುಕೊಳ್ಳಲು ಬಯಸಿದ್ದೆ". ಮನುಷ್ಯ ಪ್ರಕೃತಿಯಿಂದ ದೂರವಾದರೆ ಅವನಲ್ಲಿ ಅತಿಯಾದ ಆಸೆ ಮತ್ತು ಹೊಟ್ಟೆಬಾಕತನ ಉಂಟಾಗುತ್ತದೆಂಬುದು ಥೋರೊನ ಚಿಂತನೆ ಮತ್ತು ಆಧ್ಯಾತ್ಮಿಕ ವಿಚಾರಗಳ ಮಂಥನದಿಂದ ತಿಳಿದು ಬರುತ್ತದೆ.

ಇಂಥ ಜೀವನವು ಮನುಷ್ಯರನ್ನು ಅಹಿತಕರ ಉದ್ಯಮಶೀಲತೆಯಲ್ಲಿ ಬಂಧಿಸುವುದು. ಬುದ್ಧಿಹೀನ ಭೌತಿಕ ಹುಚ್ಚುತನವು ಯಾವುದನ್ನು ಪ್ರಗತಿಯ ದಾರಿಯೆಂದು ಕರೆಯುತ್ತದೆಯೊ ಅದು ಮನುಷ್ಯನನ್ನೂ, ಪ್ರಕೃತಿಯನ್ನೂ ಗಾಸಿಗೊಳಿಸುತ್ತದೆ. ಬಹಳಷ್ಟು ಜನರು ಮೌನವಾಗಿ ನಿರಾಶೆಯ ಜೀವನವನ್ನು ನಡೆಸುತ್ತಾರೆ. ಯಾವನಾದರೂ ಒಬ್ಬ ಮನುಷ್ಯ ಕಾಡಿನಲ್ಲಿ ಅದರ ಪ್ರೀತಿಗಾಗಿಯೇ ದಿನದ ಅರ್ಧ ಸಮಯ ಓಡಾಡಿದರೆ ಸಾಕು ಅವನನ್ನು ಜನರು ಓರ್ವ ಪೋಲಿಯೆಂದು ಭಾವಿಸುವ ಅಪಾಯವಿದೆ. ಆದರೆ ಅವನು ಇಡೀ ದಿನವನ್ನು ಕಾಡನ್ನು ಕಡಿಯುವ ಬಗ್ಗೆ ಯೋಚನೆ ಮಾಡಿದರೆ ಅವನನ್ನು ಓರ್ವ ಸಾಹಸಿ ಉದ್ಯಮಿ ನಾಗರಿಕನೆಂದು ಗೌರವಿಸಲಾಗುತ್ತದೆ! ಇಂಥ ಸಮಯದಲ್ಲಿ ನಗರವಾಸಿಗಳಿಗೆ ಕಾಡನ್ನು ಕಡಿಯುವುದರ ಹೊರತಾಗಿ ಬೇರೆ ಆಸಕ್ತಿಯೇ ಇಲ್ಲ ಎಂದು ಅನಿಸುವಂತಾಗುತ್ತದೆ. ಇದು ಪರಿಸರ ಪ್ರೇಮಿ ಥೋರೊನ ಎಚ್ಚರಿಕೆಯ ಮಾತಾಗಿದ್ದರೆ ಅಹಿಂಸೆಯ ಆರಾಧಕ ಗಾಂಧೀ ಈ ಭಾವನೆಗಳನ್ನೆ ಪ್ರತಿಧ್ವನಿಸಿದ್ದಾರೆ. ಔದ್ಯೋಗಿಕರಣವು ಇಡೀ ವಿಶ್ವವನ್ನೆ ಆವರಿಸಿಕೊಂಡಾಗ ಏನೆಲ್ಲ ಸಂಭವಿಸಬಹುದೆಂಬುದನ್ನು ಗಾಂಧೀ ವ್ಯಕ್ತಪಡಿಸಿದ್ದಾರೆ.

ಗಾಂಧೀ ಹೀಗೆ ಬರೆಯುತ್ತಾರೆ: "ಪಶ್ಚಿಮ ದೇಶಗಳು ಯಾವ ರೀತಿ ಕೈಗಾರೀಕರಣದ ತತ್ವವನ್ನು ಅಳವಡಿಸಿಕೊಂಡಿವೆಯೋ ಅಂಥದೇ ಕೈಗಾರೀಕರಣ ತತ್ವವನ್ನು ಭಾರತ ಎಂದಿಗೂ ಅಳವಡಿಸಿಕೊಳ್ಳದಿರಲಿ. ಒಂದು ಸಣ್ಣ ದ್ವೀಪದ (ಇಂಗ್ಲೆಂಡಿನ) ಆರ್ಥಿಕ ಸಾಮ್ರಾಜ್ಯಶಾಹಿಯು ಇಂದು ವಿಶ್ವವನ್ನೆ ಸರಪಣಿಯಲ್ಲಿ ಬಂಧಿಸಿದೆ. ಒಂದು ವೇಳೆ ಮೂವತ್ತು ಕೋಟಿ ಜನಸಂಖ್ಯೆಯ ದೇಶವು ಅಂಥದೆ ಆರ್ಥಿಕ ಶೋಷಣೆಯಲ್ಲಿ ತೊಡಗಿದರೆ ಅದು ಪ್ರಪಂಚವನ್ನು ಮಿಡತೆಗಳ ಹಾವಳಿಯಂತೆ ನಗ್ನಗೊಳಿಸುವುದು".

ಶಾಂತವಾಗಿರುವ ಸಮುದ್ರದ ತಳವು ಎಣ್ಣೆಗಾಗಿ ಕೊರೆಯಲ್ಪಡುತ್ತಿದೆ. ನದಿಗಳು ಮತ್ತು ಸರೋವರಗಳು ಕಲುಷಿತ ಗೊಳ್ಳಲ್ಪಡುತ್ತಿವೆ. ಗಾಳಿಯು ರಾಸಾಯನಿಕಗಳಿಂದ ಸೋಂಕುಗೊಳ್ಳಲ್ಪಡುತ್ತಿದೆ. ಹೊಸ ಉದಾರಿಕರಣದಿಂದಾಗಿ ಸರೋವರದ ಮೇಲೆ ತೇಲುವ ಎಣ್ಣೆ ನಮ್ಮ ಭೂಮಿಗೆ ಎಂಥ ಪರಿಸ್ಥಿತಿಯನ್ನು ತಂದೊದಗಿಸಿದೆ ಎಂದು ಆಲೋಚಿಸಲು ನಾವು ಸ್ವಲ್ಪ ಬಿಡುವು ಮಾಡಿಕೊಳ್ಳಬೇಕು.

ಥೋರೊನಂತೆ ನಾವು ಕೂಡ ನಗರ ಯಾವುದನ್ನು ಕುರಿತು ಆಲೋಚಿಸುತ್ತದೆಂಬುದರ ಬಗ್ಗೆ ಚಿಂತನೆ ನಡೆಸಬೇಕು. ಈ ಮಹತ್ವದ ಪ್ರಶ್ನೆಗೆ

ಉತ್ತರವನ್ನು ಥೋರೊ ಉಪದೇಶದ ಮೂಲಕವಾಗಲಿ ವಾಕ್ಚಾತುರ್ಯದ ಮೂಲಕವಾಗಲಿ ಉತ್ತರಿಸ ಬಯಸಲಿಲ್ಲ. ಬದಲಿಗೆ ಮನುಷ್ಯನನ್ನೂ, ಪ್ರಕೃತಿಯನ್ನೂ ತನ್ನ ಜೀವನ ವಿಧಾನದ ಮೂಲಕ ಉಳಿಸುವ ರೀತಿಯನ್ನು ತೋರಿಸಬಯಸಿದ್ದನು. ಅವನು ಪ್ರತಿಪಾದಿಸಿದ್ದ ಪರಿಸರ ವೇದವಾಕ್ಯದ ತಿರುಳು ಇದಾಗಿತ್ತು: ಜೀವನವನ್ನು "ಸರಳೀಕರಿಸು, ಸರಳೀಕರಿಸು, ಸರಳೀಕರಿಸು ಮತ್ತೂ ಸರಳೀಕರಿಸು." ವಾಲ್ಡೇನ್‌ನಲ್ಲಿದ್ದಾಗ ಥೋರೊನ ಜೀವನ ಈ ಎಲ್ಲದರ ಬಗ್ಗೆಯೆ ಇತ್ತು. ಅದು ವಿಶೇಷದಾಯಿತ್ವದ ಗಮನದೊಂದಿಗೆ ಹೊರೆಯಿಲ್ಲದ ಜೀವನ ನಡೆಸುವುದರ ಬಗ್ಗೆ ಇತ್ತು. ಅವನು ತನ್ನೆಲ್ಲ ಪರಿಗ್ರಹಗಳ ಪಟ್ಟಿಯನ್ನು ಮಾಡುತ್ತಾನೆ. ಆ ಪಟ್ಟಿಯಲ್ಲಿ ಅತ್ಯಗತ್ಯವಾಗಿರುವ ಪದಾರ್ಥಗಳಿಗಿಂತ ಬೇರೇನೂ ಇರಲಿಲ್ಲ. ಹೀಗೆ ಕಾಡಿನ ಸೌಗಂಧವನ್ನು ಪ್ರಶಂಸಿಸುವ ಆ ಪುಸ್ತಕದ ಮೊದಲನೆ ಅಧ್ಯಾಯ "ಅರ್ಥಶಾಸ್ತ್ರ"ವೆಂಬ ವಿಚಿತ್ರ ಶೀರ್ಷಿಕೆಯನ್ನು ಪಡೆದಿದೆ. ಸ್ವಯಂ ಪ್ರೇರಣೆಯಿಂದ ಸರಳ ಜೀವನವನ್ನು ಅಂಗೀಕರಿಸುವುದರಿಂದ ಪ್ರತಿಯೊಬ್ಬರೂ ಸಮಯವನ್ನು ಮತ್ತು ಜೀವನವನ್ನು ಆತ್ಮಸಂಸ್ಕೃತಿಯ ಕೃಷಿಗಾಗಿ ಉಪಯೋಗಿಸಿಕೊಳ್ಳಬಹುದೆಂದು ಅವನು ತೋರಿಸಿದನು. ಥೋರೊ ಮಧ್ಯರಾತ್ರಿಯ ಸಮಯದಲ್ಲಿ ಈಜುತ್ತಿದ್ದ, ನಕ್ಷತ್ರಗಳು ಮಿನುಗುವುದನ್ನು ಗಮನಿಸುತ್ತಿದ್ದ ಮತ್ತು ಅರಣ್ಯದ ಉಲಿ ಕೇಳುತ್ತಲಿದ್ದ. ತನ್ಮೂಲಕ ತನ್ನನ್ನು ಜೀವನದ ಉನ್ನತಿಯತ್ತ ಒಯ್ಯುತ್ತಿದ್ದ. ಅವನು ಬರೆದಿರುವ ದಿನಚರಿಗಳು ಅವನ ಅಂತರಂಗದ ಯಾತ್ರೆ ಮತ್ತು ಅಧಿಕೃತ ನಿಸರ್ಗದ ಇತಿಹಾಸದ ವಿಷಯಗಳನ್ನು ಹೊಂದಿದೆ. ಹೀಗೆ ಪ್ರಕೃತಿ ಪ್ರೇಮಿ ಬಂಡಾಯಗಾರ ಮತ್ತು ಹಿಮಬಿರುಗಾಳಿಗಳ ಸ್ವಯಂ ಪರಿಶೀಲನಾಧಿಕಾರಿ ಥೋರೊನ ಜೀವನ ಇಂದಿನ ನಮ್ಮ ಚಂಚಲಿತ ಕಾಲದಲ್ಲಿ ವಿಶಿಷ್ಠ ಆಕರ್ಷಣೆಯನ್ನು ಹೊಂದಿದೆ. ಇಂದು ಕೂಡ ಬಹಳಷ್ಟು ಜನರು ಆ ವಾಲ್ಡೇನ್ ಅರಣ್ಯದತ್ತ ಯಾತ್ರೆ ಬೆಳಸುತ್ತಾರೆ. ನಿರಂತರ ವಿಸ್ತೃತಗೊಳ್ಳುತ್ತಿರುವ ಈ ಆಕರ್ಷಣೆ ಥೋರೊನ ಸರಳ ಮತ್ತು ಅಗಾಧ ಜೀವನ ಸಂದೇಶಕ್ಕೆ ಪ್ರಮಾಣವಾಗಿದೆ. ಥೋರೊ ತನ್ನ ಕಾಲದಲ್ಲಿ ಎಷ್ಟು ಪ್ರಸ್ತುತವಾಗಿದ್ದನೊ ಅಷ್ಟೇ ಪ್ರಸ್ತುತ ನಮ್ಮ ಈ ಕಾಲದಲ್ಲೂ ಆಗಿದ್ದಾನೆ.

✍ ಸಾಭಾರ –ಹಿಂದೂ

ಅನು– ಸು.ಕೌ

ಅನ್ಯಾಯಯುತ ಯುದ್ಧದ ವಿರುದ್ಧ ಪ್ರತಿಭಟನೆ : ಗಾಂಧೀ ಮಾರ್ಗದಲ್ಲಿ

ಪುಣ್ಯಪ್ರಿಯ ದಾಸ್‌ಗುಪ್ತ

ಕೇವಲ ಎರಡು ತಿಂಗಳ ಹಿಂದೆ ಸಿಂಡಿ ಶಿಹ್ಯಾನ್‌ಳ ಹೆಸರನ್ನು ಯಾರು ಕೇಳಿದ್ದರು? ಇಂದು ವಿಶ್ವದಾದ್ಯಂತ ಲಕ್ಷಾವಧಿ ಜನರು ಈ ಮಹಿಳೆಯ ಬಗ್ಗೆ ಹೆಚ್ಚು ತಿಳಿಯಲು ಕಾತುರರಾಗಿರಬಹುದು. ಸಿಂಡಿ ಶಿಹ್ಯಾನ್ ಅಮೇರಿಕಾದಲ್ಲಿ ಯುದ್ಧವಿರೋಧಿ ನಾಯಕಿಯಾಗಿದ್ದಾಳೆ. ೨೦೦೩ ಫೆಬ್ರವರಿ ೧೫ರಂದು ವಿಶ್ವದ ಬೇರೆಬೇರೆ ಸ್ಥಳಗಳಲ್ಲಿ ಜನಪ್ರವಾಹವು ಬೀದಿಗೆ ಬಂದಿತು. ಇಷ್ಟರಲ್ಲಿಯೆ ಇರಾಕ್ ವಿರುದ್ಧ ದಾಳಿ ಮಾಡಲಿದ್ದ ಜಾರ್ಜ್ ಬುಷ್‌ರನ್ನು ತಡೆಯುವುದು ಈ ಜನಸಮುದಾಯದ ಉದ್ದೇಶವಾಗಿತ್ತು. ಆದರೆ ಇತಿಹಾಸದಲ್ಲಿ ಇದುವರೆಗೆ ಕಾಣದೆ ಇದ್ದಂಥ ಪ್ರತಿಭಟನೆಯೊಂದು ತನ್ನ ಉದ್ದೇಶವನ್ನು ಸಾಧಿಸಲು ವಿಫಲವಾಯಿತು. ಆದರೆ ಶಿಹ್ಯಾನ್ ಅಷ್ಟು ಸುಲಭವಾಗಿ ಸೋಲೊಪ್ಪುವ ಹೆಣ್ಣಲ್ಲ. ಅವಳು ಯುದ್ಧವನ್ನು ಪ್ರತಿಭಟಿಸುವುದಕ್ಕಾಗಿ ತನ್ನದೆ ಮಾರ್ಗವನ್ನು ಕಳೆದ ತಿಂಗಳು ಕಂಡುಕೊಂಡಳು. ಅವಳ ಈ ಕ್ರಮದಿಂದ ಇರಾಕ್ ಯುದ್ಧ ಪರವಾಗಿರುವ ಬುಷ್‌ಮನ್‌ರ ಹೌದಪ್ಪಗಳ ಸಮೂಹದಲ್ಲಿ ಕಂಪನ ಪ್ರಾರಂಭವಾಗಿದ್ದನ್ನು ನೋಡಿದರೆ ಅವಳ ಕ್ರಮ ಸರಿಯೆಂದೆನಿಸುತ್ತದೆ. ಶಿಹ್ಯಾನ್‌ಳ ೨೪ ವರ್ಷದ ಸೈನಿಕ ಮಗ ಕಳೆದ ವರ್ಷ ಏಪ್ರಿಲ್ ತಿಂಗಳಿನಲ್ಲಿ ಇರಾಕಿನ ಸದ್ರ್ ನಗರದಲ್ಲಿ ಕೊಲ್ಲಲ್ಪಟ್ಟನು. ಇದೇ ರೀತಿ ತಮ್ಮ ಮಕ್ಕಳನ್ನು ಕಳೆದುಕೊಂಡು ದುಃಖದಲ್ಲಿರುವ ಬೇರೆ ಕುಟುಂಬಗಳ ಸದಸ್ಯರೊಂದಿಗೆ ಅವಳು ಅಧ್ಯಕ್ಷ ಬುಷ್‌ರವರನ್ನು ಭೇಟಿ ಮಾಡಲು ಬಯಸಿದಳು. ಆದರೆ ಅವಳಿಗೆ ನಿರಾಶೆ ಕಾದಿತ್ತು. ಯುದ್ಧಾಕಾಂಕ್ಷಿಯಾದ ಅಮೇರಿಕಾದ ನಾಯಕತ್ವದಿಂದ ಅವಳಿಗೆ ಉಂಟಾದ ನಿರಾಶೆ ಶಮನವಾಗಲು ಸ್ವಲ್ಪ ಸಮಯ ಬೇಕಾಯಿತು. ಅಷ್ಟರಲ್ಲಿ ಅಧ್ಯಕ್ಷ ಬುಷ್‌ರವರು ಇರಾಕಿನಲ್ಲಿ ಸಾಯುತ್ತಿರುವ ಅಮೇರಿಕನ್ನರ ಮರಣ ಯೋಗ್ಯವೇ ಆಗಿದೆ. ಏಕೆಂದರೆ ಅವರು ಒಂದು ಮಹಾನ್ ಉದ್ದೇಶಕ್ಕಾಗಿ ಸಾಯುತ್ತಿದ್ದಾರೆ... ಎಂಬ ಹೇಳಿಕೆ ನೀಡಿದ್ದು ಶಿಹ್ಯಾನ್‌ಳ ಮನಸ್ಸಿನಲ್ಲಿ ಕೋಪಾಗ್ನಿ ಉಂಟಾಗಲು ಕಾರಣವಾಯಿತು. ಆಗ ಅವಳು ಬುಷ್‌ರೊಂದಿಗೆ ಎರಡನೆಯ ಭೇಟಿಗಾಗಿ ಒತ್ತಾಯಿಸಿದಳು. ಆ ಭೇಟಿಯಲ್ಲಿ ಅವಳು ಜಾರ್ಜ್

ಬುಷ್‌ರನ್ನು ಆ "ಮಹಾನ್ ಉದ್ದೇಶ" ಏನೆಂದು ಕೇಳಬಯಸಿದ್ದಳು. ಆದರೆ ಬುಷ್‌ರವರ ಕಛೇರಿ ಅವಳ ಈ ಬೇಡಿಕೆಯನ್ನು ನಿರಾಕರಿಸಿತು. ಈ ನಿರಾಕರಣೆಯ ಹಿಂದೆ ಅಕಾರಣವಾದ ಯುದ್ಧದಲ್ಲಿ ತನ್ನ ಮಗನನ್ನು ಕಳೆದುಕೊಂಡ ತಾಯಿಯೊಬ್ಬಳು ಯುದ್ಧದ ಕಾರಣವನ್ನು ತಿಳಿಯುವುದಕ್ಕಾಗಿ ಬಂದಂಥವಳನ್ನು ಎದುರಿಸಲು ನೈತಿಕ ಧೈರ್ಯವಿಲ್ಲವೆಂದು ಸಿದ್ಧವಾಯಿತು. ಅಮೇರಿಕಾದ ಇತಿಹಾಸದಲ್ಲೇ ಅತ್ಯಂತ ಹೆಚ್ಚು ವಿರಾಮ ರಜೆಯನ್ನು ಪಡೆದಿರುವ ಅಧ್ಯಕ್ಷನೆಂದು ಹೆಸರುಮಾಡಿರುವ ಬುಷ್ ಕಳೆದ ಆಗಸ್ಟ್ ೪ರಂದು ಐದು ವಾರಗಳ ವಿರಾಮ ರಜೆಗಾಗಿ ಟೆಕ್ಸಾಸ್‌ನಲ್ಲಿರುವ ತಮ್ಮ ಕ್ರಾಫೋರ್ಡ್‌ನಲ್ಲಿಯ ವಿಶ್ರಾಮಧಾಮಕ್ಕೆ ಹೋದರು. ಆಗ ಶಿಹ್ಯಾನ್ ಅಧ್ಯಕ್ಷರ ಆ ವಿಶ್ರಾಮಧಾಮದ ಐದು ಕಿ. ಮೀ. ಫಾಸಲೆಯೊಳಗೆ ರಸ್ತೆ ಪಕ್ಕದ ಹಳ್ಳವೊಂದರಲ್ಲಿ ತನ್ನ ಡೇರೆಯನ್ನು ನಿರ್ಮಿಸಿದಳು. ಜಾರ್ಜ್ ಬುಷ್ ತನ್ನನ್ನು ಭೇಟಿ ಮಾಡುವವರೆಗೆ ಅಥವಾ ತನ್ನನ್ನು ಬಂಧಿಸುವವರೆಗೆ ಅಲ್ಲಿಯೆ ಕುಳಿತುಕೊಳ್ಳುವುದಾಗಿ ಘೋಷಿಸಿದಳು. ಅವಳ ಈ ದೃಢನಿಶ್ಚಯ ಯುದ್ಧದಲ್ಲಿ ಮೃತರಾದವರ ಬಗ್ಗೆ ದುಃಖಿಸುತ್ತಿದ್ದವರ ಅನುಕಂಪವನ್ನು ಪಡೆಯಿತು. ಅಮೇರಿಕಾದಲ್ಲಿಯ ಚಿಕ್ಕ ಮತ್ತು ಹತಾಶಗೊಂಡಿರುವ ಎಡಪಂಥೀಯ ಗುಂಪನ್ನೂ ಇದು ಸಕ್ರಿಯಗೊಳಿಸಿತು. ಏಕಾಂಗಿ ಯುದ್ಧವಿರೋಧಿಯ ಈ ಧರಣಿಯು ಯುದ್ಧವಿರೋಧಿ ಕ್ರಿಯಾಶೀಲರನ್ನು ಒಂದುಗೂಡಿಸಿತು. ಶಿಹ್ಯಾನ್‌ಳ ಈ ಡೇರೆಯ ಪಕ್ಕ ಇನ್ನೂ ಅನೇಕ ಡೇರೆಗಳು ಹುಟ್ಟಿಕೊಂಡವು. ಆಗಸ್ಟ್ ೧೭ರಂದು ಅಮೇರಿಕಾದ ನಗರ ಮತ್ತು ಪಟ್ಟಣಗಳಲ್ಲಿ ಸುಮಾರು ೧,೦೦,೦೦೦ ಜನರು ೧೬೦೦ ಮೇಣದಬತ್ತಿಗಳನ್ನು ಹಚ್ಚಿ ಶಿಹ್ಯಾನ್‌ಳಿಗೆ ತಮ್ಮ ಬೆಂಬಲವನ್ನು ಸೂಚಿಸಿದರು. ಯುದ್ಧಪರವಾದ ಗುಂಪು ಶಿಹ್ಯಾನ್ ತೇಜೋವಧೆಯನ್ನು ಮಾಡುವುದರಲ್ಲಿ ಹಿಂದೆಬೀಳಲಿಲ್ಲ. ಅಧ್ಯಕ್ಷರ ಕಚೇರಿಯ ಇಬ್ಬರು ಅಧಿಕಾರಿಗಳು ಶಿಹ್ಯಾನ್‌ಳನ್ನು ಭೇಟಿಮಾಡಿ ಅವಳು ಅಧ್ಯಕ್ಷರಿಂದ ವಿವರಣೆಯನ್ನು ಪಡೆಯಲು ಹೊಂದಿದ್ದ ಹಠವನ್ನು ಬಿಡುವಂತೆ ಮನವೊಲಿಸಲು ಪ್ರಯತ್ನಿಸಿದರು. ಅಧ್ಯಕ್ಷ ಬುಷ್‌ನನ್ನು ಬೆಂಬಲಿಸುತ್ತಿದ್ದ ಮಾಧ್ಯಮ ಶಿಹ್ಯಾನ್‌ಳನ್ನು ದೇಶದ್ರೋಹಿ ಅತಿವಾದಿಯೆಂದು ಬಣ್ಣಿಸಿದವು. ಇದಕ್ಕೆ ಶಿಹ್ಯಾನ್ ಸರಿಯಾದ ಉತ್ತರವನ್ನೇ ಕೊಟ್ಟಳು. ಈ ಪ್ರಪಂಚದಲ್ಲಿ ಆಯ್ಕೆಯಾದ ಕೆಲವರಿಗೆ ಮಾತ್ರ ಲಾಭದಾಯಕ ಉದ್ದೇಶಕ್ಕಾಗಿ ತನ್ನ ಮಗ ಸಾಯಿಸಲ್ಪಟ್ಟಿದ್ದಾನೆಂದು ಅವಳು ಹೇಳಿದಳು. ತನ್ನ ಮಗನನ್ನು ಕೊಂದ ಇರಾಕಿಗಳ ವಿರುದ್ಧ ತನಗೆ ದ್ವೇಷವಿಲ್ಲವೆಂದೂ ತನ್ನ ಕೋಪ ಜಾರ್ಜ್ ಬುಷ್ ಮತ್ತು ಅವರ ವಲಯದ ವಿರುದ್ಧ ಮಾತ್ರ ಇದೆಯೆಂದೂ ಹೇಳಿದಳು. ಅವಳ ಅಭಿಪ್ರಾಯದಲ್ಲಿ

ಓರ್ವ ಇರಾಕಿಂಯರಾಗಲಿ, ಓರ್ವ ಅಮೇರಿಕನ್ ಸೈನಿಕನಾಗಲಿ ಹತನಾಗಬೇಕಾಗಿರಲಿಲ್ಲ. ಈಗ ಅವಳು ಇರಾಕ್‌ನಿಂದ ಅಮೇರಿಕಾದ ಸೈನಿಕರನ್ನು ಮರಳಿ ಮನೆಗೆ ಕರೆತರುವ ಚಳುವಳಿಗೆ ತನ್ನನ್ನು ಪೂರ್ಣವಾಗಿ ಅರ್ಪಿಸಿಕೊಂಡಿದ್ದಾಳೆ. ಬುಷ್‌ರನ್ನು ಸಮರ್ಥಿಸುವ ಶಿಹ್ಯಾನ್ ಅತ್ತೆ ಮಾವಂದಿರು ಬಹಿರಂಗವಾಗಿ ಅವಳನ್ನು ಖಂಡಿಸಿದ್ದಾರೆ. ಈ ವಿವಾದದಲ್ಲಿ ಅವಳ ಗಂಡ ತನ್ನ ನಿಲುವನ್ನು ಸ್ಪಷ್ಟಪಡಿಸಲಿಲ್ಲ. ಬದಲಿಗೆ ಶಿಹ್ಯಾನ್ ತನ್ನ ಡೇರೆಯನ್ನು ಹಾಕಿದ ಒಂದು ವಾರದೊಳಗಾಗಿ ವಿಚ್ಛೇದನೆಯ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ! ೪೮ ವರ್ಷದ ಶಿಹ್ಯಾನ್ ಹಿಂದೊಮ್ಮೆ ಕ್ಯಾಲಿಫೋರ್ನಿಯಾದಲ್ಲಿ ಕ್ಯಾಥೋಲಿಕ್ ಚರ್ಚ್‌ನಲ್ಲಿ ಸಕ್ರಿಯ ಕಾರ್ಯಕರ್ತಳಾಗಿದ್ದಳು. ಈಗ ಆ ಚರ್ಚಿನ ವಿರೋಧವನ್ನೂ ಎದುರುಹಾಕಿಕೊಂಡಳು. ಕತ್ರಿನಾ ಬಿರುಗಾಳಿಯ ಕಾರಣದಿಂದ ಬುಷ್ ತಮ್ಮ ರಜಾ ಅವಧಿಯನ್ನು ಮೊಟಕುಗೊಳಿಸಿಹೋದ ಮಾರನೆಯ ದಿನ ಆಗಸ್ಟ್ ೩೧ರಂದು ಶಿಹ್ಯಾನ್ ತನ್ನ ಡೇರೆಯನ್ನು ಕಿತ್ತಳು. ಆದರೆ ಅವಳು ತನ್ನ ಸ್ಥಳವನ್ನು ಏಕಾಂಗಿಯಾಗಿ ಬಿಡಲಿಲ್ಲ. ಮೂರು ಬಸ್ ತುಂಬ ಯುದ್ಧವಿರೋಧಿ ಕ್ರಿಯಾಶೀಲ ಕಾರ್ಯಕರ್ತರು ವಾಷಿಂಗ್ಟನ್‌ನತ್ತ ಪ್ರಯಾಣ ಬೆಳೆಸಿದರು. ಸೆಪ್ಟೆಂಬರ್ ೨೪ರಿಂದ ೨೬ರವರೆಗೆ ಅಲ್ಲಿ ನಡೆಯಲಿದ್ದ ಶಾಂತಿ ಮತ್ತು ಸಂಘಟನೆ ಎಂಬ ಕಾರ್ಯಕ್ರಮದಲ್ಲಿ ಭಾಗವಹಿಸಲು ಹೊರಟಿದ್ದರು. ಈ ಹೋರಾಟ ಗಾಂಧೀ ವಿಧಾನದ ನೇರ ಹೋರಾಟವಾಗಿತ್ತು ಮತ್ತು ನಾಗರಿಕ ಅಸಹಕಾರದ ರೀತಿಯಲ್ಲಿ ನಡೆಯುವುದಾಗಿತ್ತು. ಜಾರ್ಜ್‌ಬುಷ್ ತನ್ನನ್ನು ಭೇಟಿಮಾಡಲು ಬರದೇ ಇದ್ದುದಕ್ಕಾಗಿ ತಾನು ಅವರಿಗೆ ಆಭಾರಿಯಾಗಿರುವುದಾಗಿ ಶಿಹ್ಯಾನ್ ಹೇಳಿದಳು. ಒಂದು ವೇಳೆ ಬುಷ್ ಭೇಟಿಮಾಡಲು ಬಂದಿದ್ದರೆ ಅವಳ ಶಾಂತಿಯುತ ಹೋರಾಟಕ್ಕೆ ತೀವ್ರತೆ ಬರುತ್ತಿರಲಿಲ್ಲ. ಶಿಹ್ಯಾನ್‌ಳನ್ನು ಇನ್ನೋರ್ವ ಕಪ್ಪು ಜನಾಂಗೀಯ ಹೋರಾಟಗಾರ್ತಿ ರೋಸಾ ಪಾರ್ಕ್ಸ್‌ಳೊಂದಿಗೆ ಹೋಲಿಸುತ್ತಾರೆ. ರೋಸಾ ಪಾರ್ಕ್ಸ್ ೧೯೫೦ರ ದಶಕದಲ್ಲಿ ಸಾರಿಗೆ ಬಸ್‌ನಲ್ಲಿ ಬಿಳಿಯನೊಬ್ಬನಿಗೆ ಸ್ಥಳವನ್ನು ಬಿಟ್ಟುಕೊಡದೆ ಪ್ರತಿಭಟಿಸಿ ನಾಗರಿಕ ಹಕ್ಕುಗಳ ಚಳುವಳಿಗೆ ಕಾರಣವಾಗಿ ಅಮೇರಿಕೆಯಲ್ಲಿಯ ಕಪ್ಪು ಜನರಿಗೆ ಜಯವನ್ನು ತಂದುಕೊಟ್ಟಿದ್ದಳು.

ಸಾಭಾರ– ಡೆಕ್ಕನ್ ಹೆರಾಲ್ಡ್

ಅನು– ಸು. ಕೌ.

ಸಾಹಿತ್ಯ, ಸಂಗೀತ, ಕಲೆ ಕುರಿತ ಗಾಂಧೀ ವಿಚಾರ

✍ ಎಂ.ಯಾಮುನಾಚಾರ್ಯ

ನಮ್ಮಲ್ಲಿ ಒಂದು ಹಳೆಯ ಶ್ಲೋಕವಿದೆ; "ಸಾಹಿತ್ಯ ಸಂಗೀತ ಕಲಾವಿಹೀನಃ ಸಾಕ್ಷಾತ್ ಪಶುಃ ಪುಚ್ಛ ವಿಷಾಣ ಹೀನಃ, ತೃಣಂ ನ ಖಾದನ್ನಪಿ ಜೀವಮಾನಃ ತತ್ ಭಾಗಧೇಯಂ ಪರಮಂ ಪಶೂನಾಂ" ಅಂದರೆ ಸಾಹಿತ್ಯ ಸಂಗೀತ ಕಲೆಗಳಿಲ್ಲದವನು ಬಾಲ ಕೊಂಬುಗಳಿಲ್ಲದ ಪಶು. ಪಶುಗಳಿಗೂ ಇವನಿಗೂ ಒಂದೇ ಒಂದು ವ್ಯತ್ಯಾಸ ಉಳಿಯುತ್ತದೆ. ಪಶುಗಳು ಹುಲ್ಲನ್ನು ತಿಂದು ಜೀವಿಸುತ್ತವೆ. ಆದರೆ ಇವನು ಮಾತ್ರ ಹುಲ್ಲು ಮೇಯುವುದಿಲ್ಲ. ಈ ಶ್ಲೋಕದಿಂದ ಒಂದು ತೀರ್ಮಾನಕ್ಕೆ ಬರಬಹುದು. ಸಾಹಿತ್ಯ, ಸಂಗೀತ ಮತ್ತು ಕಲೆ ಮಾನವನಿಗೆ ವಿಶಿಷ್ಟವಾದ ಸಂಪತ್ತು. ಇವಿಲ್ಲದೆ ಮಾನವಜೀವನ ಬರಡಾಗುತ್ತದೆ. ಆದರೆ ಸಾಹಿತ್ಯ, ಸಂಗೀತ, ಕಲೆ ಇವುಗಳ ಅವಶ್ಯಕತೆಯನ್ನು ಒಪ್ಪಿಕೊಂಡರೂ ಈ ಮೂರು ವಸ್ತುಗಳ ಸ್ವರೂಪವನ್ನು ಕುರಿತು ಬಗೆ ಬಗೆಯ ಅಭಿಪ್ರಾಯಗಳಿವೆ. ಈ ರೀತಿಯ ಅಭಿಪ್ರಾಯಗಳಲ್ಲಿ ಆಸ್ಕರ್ ವೈಲ್ಡ್ ಎಂಬ ಪ್ರಸಿದ್ಧ ಆಂಗ್ಲ ಸಾಹಿತಿ ಒಂದು ಅಭಿಪ್ರಾಯಕ್ಕೆ ಬಂದಿದ್ದಾನೆ. ಅವನ ಅಭಿಪ್ರಾಯ ಮುಖ್ಯವಾಗಿ ಸಾಹಿತ್ಯವನ್ನು ಕುರಿತದ್ದು ಹಾಗೂ ಕಲೆಗೆ ಅನ್ವಯಿಸುವಂತಹದು. ಇವನ ದೃಷ್ಟಿಯಲ್ಲಿ ಸಾಹಿತ್ಯ ಸಾಹಿತ್ಯಕ್ಕಾಗಿ, ಕಲೆ ಕಲೆಗಾಗಿ. ಇವನ ಅಭಿಪ್ರಾಯದಲ್ಲಿ ಸಾಹಿತ್ಯವೆಂದರೆ ಚೆನ್ನಾಗಿ ಬರೆದದ್ದು, ಅಲಂಕಾರಮಯವಾದುದು, ಸುಂದರವಾದಂತಹುದು, ಮನೋಹರ ರೂಪ ಉಳ್ಳದ್ದು. ಇದರ ಉದ್ದೇಶ ಮನೋರಂಜನೆ, ರಸನಿಷ್ಪತ್ತಿ, ಆನಂದಾನುಭವ. ಇದನ್ನು ಬಿಟ್ಟು ಸಾಹಿತ್ಯಕ್ಕೆ, ಕಲೆಗೆ ಬೇರೆ ಪ್ರಯೋಜನವಿಲ್ಲ. ಈ ಸಂದರ್ಭದಲ್ಲಿ ಒಂದು ಪ್ರಶ್ನೆ ಏಳುತ್ತದೆ. ಇದಿಷ್ಟೇ ಸಾಹಿತ್ಯದ ಪ್ರಯೋಜನವೇ, ಇದಿಷ್ಟೇ ಕಲೆಯ ಪ್ರಯೋಜನವೇ ಎಂಬುದೆ ಈ ಪ್ರಶ್ನೆ. ಹೌದು ಎನ್ನುತ್ತಾರೆ ಆಸ್ಕರ್ ವೈಲ್ಡ್‌ನಂಥವರು. ಸಾಹಿತ್ಯ, ಸಂಗೀತ, ಕಲೆ ಮಾನವನ ಆತ್ಮೋನ್ನತಿಯ ಸಾಧನಗಳೇ ಅಲ್ಲವೇ ಎನ್ನುವುದು ಮತ್ತೊಂದು ಪ್ರಶ್ನೆ. ಈ ಪ್ರಶ್ನೆಗೆ ಆಸ್ಕರ್ ವೈಲ್ಡ್‌ನಂಥವರು ಹೀಗೆ ಹೇಳುತ್ತಾರೆ; ಆತ್ಮೋನ್ನತಿಗೂ ಸಾಹಿತ್ಯ ಸಂಗೀತ ಕಲೆಗೂ ಏನೇನೂ ಸಂಬಂಧವಿಲ್ಲ. ನೀತಿಯನ್ನು ಬೋಧಿಸುವುದು ಸಾಹಿತ್ಯದ ಕೆಲಸವಲ್ಲ. ಭಕ್ತಿಭಾವವನ್ನು ಪ್ರಚೋದನೆಗೊಳಿಸುವುದು ಸಂಗೀತದ ಉದ್ದೇಶವಲ್ಲ. ಕಲೆಗೂ ಆತ್ಮೋನ್ನತಿಗೂ, ಕಲೆಗೂ ನೀತಿಗೂ ಏನೇನೂ ಸಂಬಂಧವಿಲ್ಲ. ನೀತಿ, ಅನೀತಿ ಅನ್ನುವ ಪ್ರಶ್ನೆಯನ್ನು ತೆಗೆಯುವುದು ಸಾಹಿತ್ಯದ ಕೆಲಸವಲ್ಲ. ಸಾಹಿತ್ಯದಲ್ಲಿ ಶೀಲ ಅಶ್ಲೀಲ ಎಂಬುದು ಅಪ್ರಕೃತ. ಸಾಹಿತ್ಯದಲ್ಲಿ ವಸ್ತುವಿಗಿಂತಲೂ ಆಕಾರ ಪ್ರಧಾನ. ನೀತಿ ಬೋಧೆಗಿಂತಲೂ

ಸಂತೋಷ ಪ್ರದಾನವು ಮುಖ್ಯ.

ಈ ಮೇಲಿನ ಅಭಿಪ್ರಾಯಕ್ಕೆ ವ್ಯತಿರಿಕ್ತವಾದುದು ಗಾಂಧೀಜಿಯವರ ಅಭಿಪ್ರಾಯ. ಸಾಹಿತ್ಯ ಸಾಹಿತ್ಯಕ್ಕಾಗಿ, ಕಲೆ ಕಲೆಗಾಗಿ ಎನ್ನುವ ಆಸ್ಕರ್‌ವೈಲ್ಡ್‌ನ ಅಭಿಪ್ರಾಯವನ್ನು ಗಾಂಧೀಜಿ ಒಪ್ಪಲಿಲ್ಲ. ಗಾಂಧೀಜಿಯವರ ಅಭಿಪ್ರಾಯದಲ್ಲಿ ಸಾಹಿತ್ಯ, ಸಂಗೀತ, ಕಲೆಗಳು ಜೀವನದ ಪರಿಶುದ್ಧಿಗಾಗಿ, ಉನ್ನತಿಗಾಗಿ, ಮೇಲ್ಮೆಗಾಗಿ. ಗಾಂಧೀಜಿಯ ಅಭಿಪ್ರಾಯದಲ್ಲಿ ಯಾವ ಸಾಹಿತ್ಯ, ಸಂಗೀತ ಮತ್ತು ಕಲೆ ನಮಗೆ ಅಂತರಂಗ ಶುದ್ಧಿಯನ್ನು ತಂದುಕೊಡುವುದಿಲ್ಲವೋ ಅದು ಸಾಹಿತ್ಯವೂ ಅಲ್ಲ, ಸಂಗೀತವೂ ಅಲ್ಲ, ಕಲೆಯೂ ಅಲ್ಲ. ಸಾಹಿತ್ಯದಲ್ಲಿ, ಸಂಗೀತದಲ್ಲಿ, ಕಲೆಯಲ್ಲಿ ಒಳ್ಳೆಯದು ಕೆಟ್ಟದ್ದು ಎನ್ನುವ ವ್ಯತ್ಯಾಸ ಕಲಾದೃಷ್ಟಿಯಲ್ಲಲ್ಲದೆ ನೀತಿಯ ದೃಷ್ಟಿಯಲ್ಲೂ ಇದೆ. ನಮ್ಮ ಸ್ವಭಾವವನ್ನು ಒರಟುಗೊಳಿಸುವ, ರಾಗದ್ವೇಷಗಳನ್ನು ಕೆರಳಿಸುವ, ಆಲೋಚನೆಗಳನ್ನು ಕಲುಷಿತ ಮಾಡುವ ಸಾಹಿತ್ಯ, ಸಂಗಿತ, ಕಲೆ ಇವುಗಳು ವರ್ಜ್ಯಮಾಡಲು ಯೋಗ್ಯ ಎಂದು ಗಾಂಧೀಜಿ ಸಾರಿದರು. ಸಾಹಿತ್ಯ, ಸಂಗೀತ ಮತ್ತು ಕಲೆ ಇವುಗಳಲ್ಲಿ ಉತ್ಕೃಷ್ಟವಾದದ್ದು ಮತ್ತು ಅಪಕೃಷ್ಟವಾದದ್ದು ಎಂಬ ವ್ಯತ್ಯಾಸ ಕಲಾದೃಷ್ಟಿಯಿಂದಲೂ, ಕೌಶಲದ ದೃಷ್ಟಿಯಿಂದಲೂ ಇದ್ದೇ ಇದೆ ಎಂಬುದರಲ್ಲಿ ಸಂದೇಹವಿಲ್ಲ. ಗಾಂಧೀಜಿ ಇದಕ್ಕೆ ಸಮ್ಮತಿ ನೀಡುತ್ತಾರೆ. ಆದರೆ ಅವರ ದೃಷ್ಟಿಯಲ್ಲಿ ಇದಿಷ್ಟೇ ಸಾಹಿತ್ಯ, ಸಂಗೀತ, ಕಲೆಗಳನ್ನು ಪೂರ್ಣಗೊಳಿಸುವುದಿಲ್ಲ. ಆತ್ಮೋನ್ನತಿಗೆ ಇವು ಎಷ್ಟರಮಟ್ಟಿಗೆ ಸಾಧನವಾಗಿವೆ ಎನ್ನುವ ಪ್ರಶ್ನೆ ಎದ್ದೇ ಏಳುತ್ತದೆ. ಆ ಪ್ರಶ್ನೆಯನ್ನು ಎದುರಿಸಲೇಬೇಕು. ಉತ್ಕೃಷ್ಟ, ಅಪಕೃಷ್ಟ ಅನ್ನುವ ಮಾತುಗಳಿಗೆ ಗಾಂಧೀಜಿ ಅವರದೇ ಆದ ವಿಶಾಲ ಅರ್ಥ ಕಲ್ಪಿಸಿರುತ್ತಾರೆ.

ಇದೇ ಸಂದರ್ಭದಲ್ಲಿ ಗಾಂಧೀಜಿಯವರು ಸಾಹಿತ್ಯ, ಸಂಗೀತ, ಕಲೆಗಳ ವಿಷಯದಲ್ಲಿ ಕೃತಕ ಮತ್ತು ಸಹಜ ಎನ್ನುವ ಮಾತನ್ನು ಎತ್ತುತ್ತಾರೆ. ಯಾವ ಸಾಹಿತ್ಯ, ಸಂಗೀತ, ಕಲೆಗಳಲ್ಲಿ ಕೃತಕ ಅಂಶ ಹೆಚ್ಚಾಗಿದೆಯೋ ಅಷ್ಟುಮಟ್ಟಿಗೆ ಅವು ಕುಂಠಿತವಾಗುತ್ತವೆ ಅನ್ನುವುದು ಗಾಂಧೀಜಿಯ ಅಭಿಪ್ರಾಯ. ಜೀವನದ ಸಮಸ್ಯೆಗಳನ್ನು ಸಹಜ ದೃಷ್ಟಿಯಿಂದ ಕಂಡು ಅವುಗಳನ್ನು ಸಹಜತೆಯಿಂದ ನಿವಾರಿಸಲು ಪ್ರಯತ್ನ ಮಾಡುವುದು ಅತಿಶ್ರೇಷ್ಠ. ಈ ದೃಷ್ಟಿಯಲ್ಲಿ ಗಾಂಧೀಜಿ ನಿಸರ್ಗವಾದಿಗಳು (Naturalist) ಹಾಗೂ ವಸ್ತುವಾದಿಗಳು(Realist). ಅವರ ಅಭಿಪ್ರಾಯದಲ್ಲಿ ಆತ್ಮೋನ್ನತಿ, ಆತ್ಮವಿಶ್ವಾಸಕ್ಕೆ ಪ್ರಯತ್ನ ಮಾಡುವುದು ಮಾನವನಿಗೆ ಅತಿ ಸಹಜ. ಸಾಹಿತ್ಯ, ಸಂಗೀತ, ಕಲೆಗಳಲ್ಲಿ ಗಾಂಧೀಜಿ ಸೌಂದರ್ಯವನ್ನು ಕಂಡರು. ಆದರೆ ಈ ಸೌಂದರ್ಯ ಸತ್ಯಬಾಹಿರವಲ್ಲದ ಸೌಂದರ್ಯವಾಗಿರಬೇಕೆಂದು ಬಯಸಿದರು. ಪ್ರಸಿದ್ಧ ಆಂಗ್ಲ ಕವಿಯಾದ ಕೀಟ್ಸ್ (Keats) ಎಂಬಾತ ಸೌಂದರ್ಯವೇ ಸತ್ಯ ಎಂದ. ಆದರೆ ಗಾಂಧೀಜಿ ಇದನ್ನು ಪರಿವರ್ತನಗೊಳಿಸಿ ಸತ್ಯವೇ ಸೌಂದರ್ಯ ಎಂದರು. ಎಲ್ಲಿ

ಸತ್ಯವಿಲ್ಲವೋ ಅಲ್ಲಿ ಖಂಡಿತ ಸೌಂದರ್ಯವಿರಲಾರದು ಎಂದು ವಾದಿಸಿದರು. ಇದೇ ಸಂದರ್ಭದಲ್ಲಿ ಸೌಂದರ್ಯಕ್ಕೂ(Beauty) ಮತ್ತು ಬೆಡಗು ಬಿನ್ನಾಣಕ್ಕೂ (Charm) ವ್ಯತ್ಯಾಸ ತೋರಿಸಿದರು. ನಿಜವಾದ ಸೌಂದರ್ಯ ಬಾಹ್ಯ ಆಕಾರದ ಸೌಂದರ್ಯ ಅಲ್ಲವೆಂದು ವಾದಿಸಿದರು. ಬಾಹ್ಯ ಆಕಾರ ನೆಟ್ಟಗಿರಬಹುದು, ಆದರೆ ಆತ್ಮಶುದ್ಧಿ ಇಲ್ಲದ ಕಡೆ ಅದು ಕೇವಲ ಶವಾಲಂಕಾರ. ಗಾಂಧೀಜಿಗೆ ಅಶ್ಲೀಲ ಸಾಹಿತ್ಯವೆಂದರೆ ಅನೀತಿಯನ್ನೂ ಸುಂದರವಾದುದೆಂಬಂತೆ ರೂಪಿಸಿ ಹೇಳುವುದು (Beautifying immorality). ಆತ್ಮ ಸೌಂದರ್ಯಕ್ಕೆ ಉದಾಹರಣೆಯಾಗಿ ಪ್ರಾಚೀನ ಗ್ರೀಕ್ ತತ್ವಜ್ಞಾನಿ ಸಾಕ್ರಟೀಸನ ಉದಾಹರಣೆಯನ್ನು ಉಲ್ಲೇಖಿಸಿದರು. ಎಲ್ಲರಿಗೂ ತಿಳಿದಂತೆ ಬಾಹ್ಯರೂಪವನ್ನು ನೋಡಿದರೆ ಸಾಕ್ರಟೀಸ್ ಬಹಳ ಕುರೂಪಿಯಾಗಿದ್ದ. ಆದರೆ ಆ ವಕ್ರ ರೂಪದಲ್ಲಿ ಒಂದು ಸುಂದರವಾದ ಆತ್ಮ ನೆಲಸಿತ್ತು. ಆ ಆತ್ಮದ ತೇಜಸ್ಸು ಆ ಅಷ್ಟಾವಕ್ರ ದೇಹದ ಮೂಲಕ ಹೊರಸೂಸುತ್ತಿತ್ತು. ಗಾಂಧೀಜಿ ಸಾಕ್ರಟೀಸನನ್ನು "A beautifull soul" ಎಂದು ಕರೆದರು. ಪ್ಲೇಟೋ ಇದನ್ನೇ ಸುಂದರ ದೇಹದಲ್ಲಿ ಒಂದು ಸುಂದರ ಆತ್ಮ ಎನ್ನುವ ತತ್ವವನ್ನಾಗಿ ಬೋಧಿಸಿದ. ಬಾಹ್ಯ ಸೌಂದರ್ಯಕ್ಕೆ ಚೈತನ್ಯಕೊಡತಕ್ಕದ್ದು ಆಂತರಿಕ ಸೌಂದರ್ಯ. ಬಾಹ್ಯ ಸೌಂದರ್ಯ ಕೇವಲ ಬಹಿರಿಂದ್ರಿಯ ಗೋಚರ, ಸ್ಥೂಲ; ಆಂತರಿಕ ಸೌಂದರ್ಯ ಅಂತರಿಂದ್ರಿಯ ಗೋಚರ, ಸೂಕ್ಷ್ಮ.

ಗಾಂಧೀಜಿಯ ದೃಷ್ಟಿಯಲ್ಲಿ ನಿಸರ್ಗದ ಸೌಂದರ್ಯದ ಮುಂದೆ ಮಾನವನ ಕೃತಿ ಸೌಂದರ್ಯ, ಸೂರ್ಯನ ಮುಂದೆ ಮಿಣುಕುಹುಳು ಇದ್ದಂತೆ. ನಕ್ಷತ್ರಗಳ, ನದ, ನದಿಗಳ, ಪರ್ವತ ಶ್ರೇಣಿಗಳ, ಪುಷ್ಪ ಪತ್ರಗಳ, ಸುಂದರ ಮೃಗಗಳ, ಸೂರ್ಯೋದಯ, ಸೂರ್ಯಾಸ್ತಮಯ ಇವುಗಳ ಮುಂದೆ ಮಾನವ ನಿರ್ಮಿತ ಸೌಂದರ್ಯ ಎಷ್ಟು ಮಾತ್ರದ್ದು ಎಂದು ಕೇಳಿದರು. ಅವರು ಗುಡಿಸಲಿನಲ್ಲಿ ವಾಸ ಮಾಡುತ್ತಿದ್ದುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆ ಗುಡಿಸಲಿನಲ್ಲಿ ಗೋಡೆಗಳ ಮೇಲೆ ಯಾವ ಚಿತ್ರವೂ ಇರಲಿಲ್ಲ. ಅವರ ಕೊಠಡಿಯಲ್ಲಿ ಯಾವ ಕಲಾಕೃತಿಯೂ ಇರಲಿಲ್ಲ. ಇದನ್ನು ನೋಡಿ ಮಿತ್ರರೊಬ್ಬರು ಅವರನ್ನು ಕೇಳಿದರು, ನಿಮಗೆ ಕಲೆಯಲ್ಲಿ ಆಸಕ್ತಿ ಇಲ್ಲವೇ ಎಂದು. ಅದಕ್ಕೆ ಉತ್ತರವಾಗಿ ಗಾಂಧೀಜಿ ಅಂದರು: ನನಗೆ ಕಲೆಯಲ್ಲಿ ಆಸಕ್ತಿ ಇದೆ. ಆದರೆ ನಾನು ಮೆಚ್ಚುವ ಕಲೆಗೂ, ಇತರರು ಮೆಚ್ಚುವ ಕಲೆಗೂ ತುಂಬಾ ವ್ಯತ್ಯಾಸ . ನಕ್ಷತ್ರ ಲೋಕದ ಸೌಂದರ್ಯವನ್ನು ಸವಿಯಲು ಗುಡಿಸಲಿನ ಮೇಲೆ ಚಾವಣಿಯೂ ಬೇಡವೆಂದರು ಗಾಂಧೀಜಿ.

ಗಾಂಧೀಜಿಯ ಅಭಿಪ್ರಾಯಗಳು ಸಂಗೀತವನ್ನು ಕುರಿತು ಇದೇ ಧಾಟಿಯಲ್ಲಿ ಇದ್ದವು. ಸಂಗೀತ ಎಂದರೆ ಅವರಿಗೆ ಬಹಳ ಇಷ್ಟ. ಆದರೆ, ಪುರಂದರದಾಸರು ಒಲ್ಲದ ಪ್ರಾಮವಿಲ್ಲದ ಗಾನ, ಡಾಂಭಿಕತನದ ಕೂಗಾಟ ಇವರಿಗೆ ಬೇಕಾಗಿರಲಿಲ್ಲ.

ತ್ಯಾಗರಾಜರು ಒಲ್ಲದ "ಸಂಗೀತ ಜ್ಞಾನಮು ಭಕ್ತಿ ವಿನಾ" ಇವರಿಗೆ ಬೇಕಾಗಿರಲಿಲ್ಲ. ಹಾಗೂ ವಿಪರೀತ ಪರಿಶ್ರಮ ಮಾತ್ರದಿಂದಲೇ ಸಂಪಾದನೆ ಮಾಡಿದ ವಿದ್ವತ್‌ಪೂರ್ಣ ಹಾಗೂ ಕಸರತ್ತಿನ ಸಂಗೀತ ಇವರಿಗೆ ಬೇಕಾಗಿರಲಿಲ್ಲ. ಅದೃಷ್ಟವಶಾತ್ ಗಾಂಧೀಜಿಯವರಿಗೆ ಭಾರತದ ಭಕ್ತರೆಲ್ಲರೂ ಸಂಗೀತಜ್ಞರಾಗಿದ್ದರು. ಹಾಗೂ ಭಾರತದ ಪ್ರಾಚೀನ ಸಂಗೀತಜ್ಞರು ಭಗವದ್ಭಕ್ತರಾಗಿದ್ದರು. ಗಾಂಧೀಜಿಯವರ ದೃಷ್ಟಿಯಲ್ಲಿ ಭಗವದ್ಭಕ್ತಿ ಮತ್ತು ಜ್ಞಾನಕೌಶಲ ಎಡೆಬಿಡದ ಸಂಬಂಧ ಹೊಂದಿತ್ತು. ಗಾನ ಕೌಶಲ ಭಗವತ್ಸಾಕ್ಷಾತ್ಕಾರಕ್ಕಾಗಿ ಎಂದು ಬಗೆದರು. ಇದರ ಸಲುವಾಗಿಯೇ ಅವರಿಗೆ ಗಾನರೂಪದಲ್ಲಿ ಹಾಡಿದ ತುಳಸೀದಾಸ್ ರಾಮಾಯಣ ಪ್ರಿಯವಾಯಿತು. ಮೀರಾಬಾಯಿಯ ಭಕ್ತಿಗಾನ ಪ್ರಿಯವಾಯಿತು. ಭಕ್ತಿಗೀತೆಗಳನ್ನು ಕೇಳುತ್ತಾ, ಕೇಳುತ್ತಾ ಗಾಂಧೀಜಿ ಮೈಮರೆಯುತ್ತಿದ್ದರು. ಭಗವಂತನಲ್ಲಿ ತಲ್ಲೀನರಾಗುತ್ತಿದ್ದರು. ಈ ತನ್ಮಯತೆ ಅವರ ಜೀವನದ ಅಮರ ನಿಮಿಷಗಳಾಗಿದ್ದವು. ಗಾಂಧೀಜಿಯವರಿಗೆ ಮುಖ್ಯವಾಗಿ ಒಪ್ಪುವ ಸಂಗೀತ ಬೌದ್ಧಿಕ ಸಂಗೀತಕ್ಕಿಂತಲೂ ಹಾರ್ದಿಕ ಸಂಗೀತ, ಕೀರ್ತನೆ ಭಜನೆಗಳಲ್ಲಿ ಬಳಸಲ್ಪಡುವ ಸಂಗೀತ. ಪಾಂಡಿತ್ಯ ಪ್ರದರ್ಶನಕ್ಕಿಂತಲೂ ಭಕ್ತಿಭಾವಕ್ಕೆ ಇಲ್ಲಿ ಪ್ರಾಶಸ್ತ್ಯ ಹೆಚ್ಚು.

ಕಡೆಯಲ್ಲಿ ಗಾಂಧೀಜಿಯವರ ದೃಷ್ಟಿಯಲ್ಲಿ ಸಂಗೀತ, ಸಾಹಿತ್ಯ, ಕಲೆಗಳು ಆತ್ಮವಿಕಾಸಕ್ಕೆ ಬೇಕಾದ ಅದ್ಭುತ ಸಾಧನಗಳಾಗಿದ್ದವು. ಮಾನವನ ಉನ್ನತಿಗೆ ಆತ್ಮವಿಕಾಸಕ್ಕೆ ಒಳ್ಳೆಯ ಸಾಹಿತ್ಯ, ಒಳ್ಳೆಯ ಸಂಗೀತ, ಒಳ್ಳೆಯ ಕಲೆ ಅತ್ಯವಶ್ಯಕವೆಂಬುದನ್ನು ಮನಗಂಡಿದ್ದರು. ಕಲೆಗಾಗಿ ಕಲೆ(Art for art sake) ಎನ್ನುವುದರ ಬದಲು ಜೀವನಕ್ಕಾಗಿ ಕಲೆ(Art for the sake of life) ಎನ್ನುವುದು ಇವರ ಘೋಷಣೆ ಆಗಿತ್ತು.

ಗಾಧೀಜಿಯ ಅಭಿಪ್ರಾಯಗಳು ವಿವಾದಾಸ್ಪದವಲ್ಲದೇ ಇಲ್ಲ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಕಲಾಕೌಶಲದ ಮೇಲೆ ಮಾತ್ರ ದೃಷ್ಟಿಯುಳ್ಳ ಕಲಾಭಿಜ್ಞರು ಗಾಂಧೀಜಿ ಅವರ ಈ ಅಭಿಪ್ರಾಯವನ್ನು ಸುಲಭವಾಗಿ ಒಪ್ಪುವುದಿಲ್ಲ. ಇದು ಹೇಗಾದರೂ ಇರಲಿ ಗಾಂಧೀಜಿ ತಮ್ಮ ಅಭಿಪ್ರಾಯವನ್ನು ಮಾತ್ರ ಖಚಿತವಾದ ಮಾತುಗಳಲ್ಲಿ ವಿವರಿಸಿದರು.

–ಸಾಭಾರ ; ಪ್ರಬುದ್ಧ ಕರ್ನಾಟಕ.
ಸೌಮ್ಯ ಸಂವತ್ಸರ, ಪುಷ್ಯ ಸಂಚಿಕೆ.

ಶಾಂತಿ ಮತ್ತು ಮಹಾತ್ಮಾ ಗಾಂಧಿ

✍ ಅಲ್ಬರ್ಟ್ ಐನ್‌ಸ್ಟೀನ್

ಇಡೀ ಮಾನವ ಜನಾಂಗದ ಉತ್ತಮ ಭವಿಷ್ಯಕ್ಕೆ ಹಾಗೂ ಸುಂದರ ಕನಸುಗಳಿಗೆ ಕಾಳಜಿ ವ್ಯಕ್ತಪಡಿಸುವ ಪ್ರತಿಯೊಬ್ಬರೂ ಗಾಂಧೀಜಿಯವರ ದಾರುಣ ಅವಸಾನಕ್ಕೆ ವ್ಯಥೆಪಡಲೇ ಬೇಕು. ಗಾಂಧಿ ಎಂಬ ವ್ಯಕ್ತಿ ಬಲಿ ಪಶುವಾದದ್ದು ತನ್ನ ತತ್ವಗಳಿಗೆ; ಅಹಿಂಸಾ ಮಾರ್ಗವನ್ನು ಆಚರಿಸಿದ ತಪ್ಪಿಗೆ. ಅವರು ತನ್ನ ದೇಶದ ಮೇರೆ ಮೀರಿದ್ದ ಅವ್ಯವಸ್ಥೆ, ಬುಗಿಲೆದ್ದಿದ್ದ ಹಿಂಸೆ ಹಾಗೂ ತಾಂಡವಾಡುತ್ತಿದ್ದ ಅರಾಜಕತೆಯ ಸಂದರ್ಭಗಳ ನಡುವೆಯೂ ತನಗೆ ಯಾರ ರಕ್ಷಣೆಯೂ ಬೇಡವೆಂದು ಹೇಳಿದರು. ಹೀಗಾಗಿ ರಕ್ಷಣೆಯನ್ನು ನಿರಾಕರಿಸಿದ ತಪ್ಪಿಗೆ ಕೊನೆಯುಸಿರೆಳೆದುಬಿಟ್ಟರು.

'ಶಕ್ತಿಯ ದುರ್ಬಳಕೆ ಒಂದು ಪಾಪದ ಕ್ರಮ. ನ್ಯಾಯಕ್ಕಾಗಿ ಹಾತೊರೆಯುವ ಪ್ರತಿಯೊಬ್ಬ ಮನುಷ್ಯ ಅಂತಹ ದುರ್ಬಳಕೆಯನ್ನು ಖಡಾಖಂಡಿತವಾಗಿ ತಿರಸ್ಕರಿಸಲೇಬೇಕು'. ಇದು ಅಚಲ ನಂಬಿಕೆ. ಇಂತಹ ಒಂದು ನಂಬಿಕೆಗಾಗಿ ತನ್ನ ಇಡೀ ಬದುಕನ್ನೇ ಮುಡಿಪಾಗಿಟ್ಟಾತ ಗಾಂಧಿ. ಈ ನಂಬಿಕೆಯನ್ನು ತನ್ನ ಮನಸ್ಸು ಹಾಗೂ ಹೃದಯದಲ್ಲಿ ಗಟ್ಟಿ ಗೊಳಿಸಿಕೊಳ್ಳುತ್ತಲೇ ತನ್ನ ದೇಶವನ್ನು ದಾಸ್ಯದಿಂದ ವಿಮುಕ್ತಿಗೊಳಿಸುವಲ್ಲಿ ಯಶಸ್ವಿಯೂ ಆದರು.

'ಸಾಮಾನ್ಯ ಜನತೆಯ ಪ್ರೀತಿ, ವಿಶ್ವಾಸ, ನಿಷ್ಠೆಯನ್ನು ಗೆಲ್ಲಬೇಕೆಂದರೆ ಒಂದು ಪರಿಶುದ್ಧ ನೈತಿಕ ಬದುಕು ಅವಶ್ಯಕ; ಅಂತಹ ಪ್ರೀತಿಯನ್ನು ವಂಚನೆ, ರಾಜಕೀಯ ದಗಲಬಾಜಿತನ ಹಾಗೂ ಅನೈತಿಕ ಮಾರ್ಗಗಳಿಂದ ಗೆಲ್ಲಲು ಎಂದಿಗೂ ಸಾಧ್ಯವಿಲ್ಲ'. ಎಂಬುದನ್ನು ಎಳೆ ಎಳೆಯಾಗಿ ತಿಳಿಸಿದರು.

ಇಂದಿನ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಗಾಂಧಿಯವರ ಬಗ್ಗೆ ಅಪಾರವಾದ ಆದರ, ಪ್ರೇಮ, ಗೌರವಗಳಿವೆ. ದಿನದಿಂದ ದಿನಕ್ಕೆ ಅನೈತಿಕ ಬದುಕಿನತ್ತ ಸಾಗುತ್ತಿರುವ ಈ ಪ್ರಪಂಚದಲ್ಲಿ ಗಾಂಧಿ ಮಾತ್ರ ಮನುಕುಲದ ಶ್ರೇಷ್ಠ ಸಂಬಂಧಗಳ ಪ್ರತೀಕ. ಆತ ಸಾಗಿದ ಹಾದಿಯನ್ನು ನಮ್ಮದನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಪ್ರತಿಯೊಬ್ಬರು ಆಸೆ ಪಡಬೇಕಿದೆ.

ಬೆತ್ತಲೆ ಅಧಿಕಾರದ ಭಯ ತೀರಾ ಅಪಾಯ; ನಾವು ತೆಗೆದುಕೊಳ್ಳುವ ಪ್ರತಿ ಕ್ರಮವೂ, ನಡೆಯುವ ಪ್ರತಿ ಹೆಜ್ಜೆಯೂ ನ್ಯಾಯಸಮ್ಮತವಾಗಿರಬೇಕು; ಕಾನೂನಿನ

ಚೌಕಟ್ಟಿನಲ್ಲಿಯೇ ಇರಬೇಕು; ಅಂದಾಗಲೇ ಮಾತ್ರ ಮುಂಬರುವ ಜನಾಂಗದ ಭವಿಷ್ಯ ಸಹನಶೀಲವಾಗಿರಲು ಸಾಧ್ಯ- ಎಂಬ ಅತ್ಯಂತ ಕಠಿಣ ಪಾಠವನ್ನು ತಿಳಿದು ಕೊಳ್ಳಬೇಕಿರುವುದು ಇಂದಿನ ತುರ್ತು ಅವಶ್ಯಕ.

ನಾವು ಆಯ್ಕೆ ಮಾಡಬೇಕಾದ ಹಾದಿ ಯಾವುದು? ಅದು ಹೇಗಿರಬೇಕು? ಎಂಬುದನ್ನು ತಿಳಿಸಿಕೊಟ್ಟ ನಮ್ಮ ಕಾಲಘಟ್ಟದ ಶ್ರೇಷ್ಠ ರಾಜನೀತಿಜ್ಞ ಗಾಂಧಿ. ಒಂದು ಸಲ ಸತ್ಯದ ಹಾದಿಯನ್ನು ಕಂಡುಕೊಂಡು ನಂತರ ಮನುಷ್ಯ ಯಾವ ಮಟ್ಟದ ತ್ಯಾಗ ಮಾಡಬಲ್ಲ ಎಂಬುದಕ್ಕೆ ಗಾಂಧಿ ಸಾಕ್ಷಿಯನ್ನು ಒದಗಿಸಿದಾತ. ಸೈನಿಕ ಹಾಗೂ ಇತರೆ ಶಕ್ತಿಗಳು ಮನುಷ್ಯನ ಇಚ್ಛಾಶಕ್ತಿ, ದೃಢವಾದ ನಂಬಿಕೆ ಹಾಗೂ ಅಚಲ ಶ್ರದ್ಧೆಗಳಿಗಿಂತಲೂ ಬಲಶಾಲಿ ಎಂಬಂತೆ ಮೇಲ್ನೋಟಕ್ಕೆ ತೋರಿದರೂ ಅದು ಸುಳ್ಳು ಎನ್ನುವುದಕ್ಕೆ ಗಾಂಧೀಜಿಯವರ ಹೋರಾಟದ ಬದುಕೇ ಒಂದು ಸರ್ಟಿಫಿಕೇಟು.

ನಮ್ಮ ಕಾಲಘಟ್ಟದ ಶ್ರೇಷ್ಠ ಮನಸ್ಸುಗಳ ಸರ್ವ ಶ್ರೇಷ್ಠ ಮೌಲ್ಯಗಳೆಲ್ಲವೂ ಅವರಲ್ಲಿದ್ದವು ಎಂಬುದು ನನ್ನ ಬಲವಾದ ನಂಬಿಕೆ. 'ನಮ್ಮ ಯಾವುದೇ ಕೆಲಸ ಹಿಂಸೆಯ ಮೂಲಕ ಆಗಬಾರದು; ನಾವು ಪಾಪದ ಕೆಲಸಗಳಿಂದ ನೂರು ಗಾವುದ ದೂರ ಇರಬೇಕು' ಇದು ಗಾಂಧಿಯು ಹಾಕಿಕೊಟ್ಟ ಮಾರ್ಗ. ಈ ಮಾರ್ಗ ಎಲ್ಲರಿಗೂ ಆದರ್ಶಪ್ರಾಯವಾಗಬೇಕು. ಅಹಿಂಸೆ, ರಕ್ತರಹಿತ ಕ್ರಾಂತಿಗಳ ಮೂಲಕ ತನ್ನ ದೇಶಕ್ಕೆ ಸ್ವಾತಂತ್ರ್ಯವನ್ನು ಗಾಂಧಿ ಗಳಿಸಿಕೊಟ್ಟರು. ಹಾಗಾಗಿ ಅವರ ಅಹಿಂಸಾ ತತ್ವಗಳನ್ನು ಪಾಲಿಸುವುದರಿಂದ ಮಾತ್ರವೇ ಇಂದಿನ ಜಗತ್ತಿನಲ್ಲಿ ಶಾಂತಿ ನೆಲೆಸಲು ಸಾಧ್ಯ.

ಮಾಂಸ ಖಂಡಗಳಿಂದ ಕೂಡಿದ, ನಮ್ಮಂತೆಯೇ ಸಾಮಾನ್ಯರಂತಿದ್ದೂ ಕೂಡ ಶ್ರೇಷ್ಠತೆಯನ್ನು ಸಾಧಿಸಿದ ವ್ಯಕ್ತಿ ಗಾಂಧಿ. ಅಂತಹ ನರಮಾನವನೊಬ್ಬ ಇದೇ ನೆಲದ ಮೇಲೆ ಒಂದಾನೊಂದು ಕಾಲದಲ್ಲಿ ನಡೆದಾಡಿದ, ಜೀವಿಸಿದ ಹಾಗೂ ಶ್ರೇಷ್ಠತೆಯನ್ನು ಸಾಧಿಸಿದ ಎಂಬ ಸಂಗತಿಯನ್ನು ಮುಂಬರುವ ಪೀಳಿಗೆ ಬಹುಶ: ನಂಬಲಿಕ್ಕೆ ಸಾಧ್ಯವಿಲ್ಲವೇನೋ!

ಕನ್ನಡಕ್ಕೆ: ✍ ಜಗದೀಶ ಅಂಗಡಿ

ಜನಪದ ನಿಲಯದ ಅಂತರಂಗದಲ್ಲಿ. . . . ೨೩



ಈಶನಾ ವಾಸವೀ ಜಗದೊಳಿಹುದೆಲ್ಲವೂ
ಈಶನಿಗೆ ಮೀಸಲಾಗಿಹುದೆಲ್ಲವೂ
ಆಶಿಸದೆ ಏನನೂ ಆತನಿತ್ತುದನುಂಡು
ವಾಸಿಸೈ ನೀನು ಸಂತಸದಿಂದಲಿ

– ಈಶವಾಸ್ಯೋಪನಿಷತ್

ಸಾಂಗಲಿಯನ್ನು ತಲುಪಿ ನನ್ನ ತಂದೆ-ತಾಯಿಗಳಿಗೆ ನಾನು ಮದುವೆಯಾಗಲಿಚ್ಛಿಸಿರುವ ವಿಷಯವನ್ನು ಮತ್ತು ನಾನು ಮದುವೆಯಾಗಲಿರುವ ಹುಡುಗಿಯ ವಿಷಯವನ್ನು ಬಹು ಸಂಕೋಚವಾಗಿ ಮತ್ತು ಅಳುಕುವ ಮನಸ್ಸಿನಿಂದ ಹೇಳಿದೆ. ಇದಕ್ಕೊಂದು ವಿಶೇಷ ಕಾರಣವಿತ್ತು. ನಮ್ಮ ಮನೆ ಮಾಧ್ವ ಸಂಪ್ರದಾಯದ ಕುಟುಂಬವಾಗಿತ್ತು. ನನ್ನ ತಂದೆ ತಾಯಿಗಳು ಬಹಳ ನಿಷ್ಠೆಯಿಂದ ಸಂಪ್ರದಾಯವನ್ನು ಆಚರಿಸುತ್ತಿದ್ದರು. ನನ್ನ ತಾಯಿಯ ತಾಯಿಯವರೂ ಸಹ ಇದ್ದರು. ಇವರಿಬ್ಬರೂ ಕೂಡ ಮಡಿಮೈಲಿಗೆಯ ವಿಚಾರದಲ್ಲಿ ಸೂಕ್ಷ್ಮವಾಗಿದ್ದರು. ಈಗ್ಗೆ ಅರ್ಧಶತಮಾನದ ಹಿಂದೆ ಸಂಪ್ರದಾಯಸ್ಥ ಕುಟುಂಬಗಳಲ್ಲಿ ಮಡಿ ಮೈಲಿಗೆಯ ವಿಚಾರ ಹೆಚ್ಚು ಮಹತ್ವವನ್ನು ಪಡೆದಿದ್ದಿತು. ಅಂತರ್ಜಾತಿಯ ವಿವಾಹದ ಮಾತಂತೂ ಕಿವಿಗೆ ಕಾದಕಬ್ಬಿಣದ ರಸವನ್ನು ಸುರಿದಂತಾಗುತ್ತಿತ್ತು. ಒಳಜಾತಿಯ ವಿವಾಹ ಜಾತಿಗಳಲ್ಲಿ ವಿವಾಹವೂ ಕೂಡ ಸ್ವಾಗತಾರ್ಹವಾಗಿರಲಿಲ್ಲ. ಮದುವೆ ಎಂದರೆ ಹಿರಿಯರಲ್ಲಿ ಕೆಲವುನಿರೀಕ್ಷೆಗಳು, ಕೆಲವು ಆಚರಣೆಗಳ ಇಂಗಿತಗಳು ಇರುತ್ತಿದ್ದವು. ಉದಾಹರಣೆಗೆ ವರದಕ್ಷಿಣೆ ಪಡೆಯುವುದು, ಮದುವೆ ನಿಶ್ಚಿತಾರ್ಥಕ್ಕಿಂತ ಮುಂಚೆ ಹುಡುಗಿಯೊಂದಿಗೆ ಓಡಾಡುವುದು, ಮದುವೆಯ ಖರ್ಚನ್ನು ಹೆಣ್ಣಿನವರೆ ನಿರ್ವಹಿಸಬೇಕೆಂಬ ನಿರೀಕ್ಷೆ ಇತ್ಯಾದಿಗಳು. ಈ ಎಲ್ಲ ನಿರೀಕ್ಷೆಗಳು ಮತ್ತು ವಿಚಾರಗಳಿಗೆ ವ್ಯತಿರಿಕ್ತವಾಗಿ ನನ್ನ ವಿವಾಹ ನಡೆಯುವ ಸಂಭವವಿದ್ದುದರಿಂದ ನನ್ನ ತಂದೆ-ತಾಯಿಗಳು ನನ್ನ ಮದುವೆಯ ಬಗ್ಗೆ ಯಾವ ರೀತಿ ಪ್ರತಿಕ್ರಿಯಿಸುತ್ತಾರೆಂಬುದರ ಕುರಿತು ನನಗೆ ಅಂಜಿಕೆ ಇದ್ದುದರಿಂದ ಅವರ ಮುಂದೆ ಮದುವೆಯ ವಿಷಯವನ್ನು ಪ್ರಸ್ತಾಪಿಸುವಾಗ ಅಂಜಿಕೆಯಿದ್ದುದು ಸಹಜವಾಗಿತ್ತು. ಅಲ್ಲದೆ ಇದೆಲ್ಲದಕ್ಕಿಂತ ಮಿಗಿಲಾಗಿ ನನಗೆ ನೌಕರಿ ಎಂಬರ್ಥದಲ್ಲಿ ಯಾವುದೇ ಸುಭದ್ರವಾದ ಕೆಲಸವಿರಲಿಲ್ಲ. ನಾನು ಜಯಪ್ರಕಾಶ್ ನಾರಾಯಣರೊಂದಿಗೆ ದೂರದ ಬಿಹಾರಿನಲ್ಲಿ ಕೇವಲ ೫೦ ರೂಪಾಯಿಗಳ ಗೌರವಧನದೊಂದಿಗೆ ಕೆಲಸಮಾಡಿಕೊಂಡಿದ್ದೆ. ಯಾವ ಸಂಪಾದನೆಯೂ ಇಲ್ಲದ ಮಗನ ಮದುವೆಯನ್ನು ಮಾಡುವುದು ಹೇಗೆ ಎಂಬ ಚಿಂತೆ ತಂದೆ-ತಾಯಿಗಳಲ್ಲಿ ಹುಟ್ಟುವುದು ಸಹಜವೇ ಆಗಿತ್ತು. ಈ ಎಲ್ಲ ಪ್ರಕಾರದ ತೊಡಕುಗಳಿಗೆ ಕಳಸವಿಟ್ಟಂತೆ ತಂದೆ-ತಾಯಿಗಳ ಸಂಪ್ರದಾಯದ ವಿಚಾರಕ್ಕೆ ವಿರೋಧವಾದ ಕೆಲಸವೊಂದನ್ನು ಮಾಡಲು ಹೊರಟಿದ್ದೆ. ನಾನು ಮೆಚ್ಚಿದ್ದ ಹುಡುಗಿ ಸ್ಮಾರ್ತ ಸಂಪ್ರದಾಯಕ್ಕೆ ಸೇರಿದವಳು. ಸ್ಮಾರ್ತ ಸಂಪ್ರದಾಯಕ್ಕೆ ಸೇರಿದ್ದ ಹುಡುಗಿಯನ್ನು ಮಾಧ್ವ

ಸಂಪ್ರದಾಯದ ಮನೆಗೆ ಸೊಸೆಯನ್ನಾಗಿ ತಂದರೆ ತಮ್ಮ ಗತಿಯೇನು ಎಂಬ ಚಿಂತೆ ತಂದೆ-ತಾಯಿಗಳನ್ನು ಕಾಡಿದ್ದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ಇಳಿವಯಸ್ಸಿನತ್ತ ಸಾಗುತ್ತಿರುವ ತಮಗೆ ಸಹಾಯಕಳಾಗಿ ಸೊಸೆ ಬೇಕೆಂದು ಎಲ್ಲರೂ ಬಯಸುತ್ತಾರೆ. ಆದರೆ ಮನೆಗೆ ಬರುವ ಸೊಸೆ ಬೇರೆ ಸಂಪ್ರದಾಯದವಳಾದರೆ ಅವಳಿಂದ ಊಟೋಪಚಾರ, ದೇವರಪೂಜೆ ಇತ್ಯಾದಿ ಕೆಲಸಗಳಲ್ಲಿ ಸಹಾಯ ಪಡೆಯುವುದು ಹೇಗೆ? ಆರೋಗ್ಯ ಕೆಟ್ಟು ಹಾಸಿಗೆ ಹಿಡಿದರೆ ಸೇವೆಪಡೆಯುವುದು ಹೇಗೆ? ಎಂಬಿತ್ಯಾದಿ ಪ್ರಶ್ನೆಗಳು ನನ್ನ ತಾಯಿಯ ಮನಸ್ಸಿನಲ್ಲಿ ಎದ್ದಿರಬಹುದು. ಆದ್ದರಿಂದ ನಾನು ಮದುವೆಯಾಗುವ ಹುಡುಗಿ ಸ್ಮಾರ್ತ ಸಂಪ್ರದಾಯಕ್ಕೆ ಸೇರಿದವಳೆಂದು ಕೇಳಿದಾಗ ನನ್ನ ಮದುವೆಯ ವಿಚಾರ ಅವರಲ್ಲಿ ಉತ್ಸಾಹ ಮತ್ತು ಸಂತೋಷವನ್ನು ಹೆಚ್ಚಿಸುವುದಕ್ಕಿಂತ ನಿರಾಶೆ ಮತ್ತು ಆತಂಕವನ್ನುಂಟುಮಾಡಿದವು. ಇದೆಲ್ಲವನ್ನು ಮರೆಯಲು ಸಾಧ್ಯವಾಗುವುದಕ್ಕೆ ಹೆಣ್ಣಿನ ಕಡೆಯವರು ಹಣಕಾಸಿನ ಸ್ಥಿತಿಯಿಂದ ಉತ್ತಮರಾಗಿದ್ದರೆ ಪರಿಸ್ಥಿತಿ ಬೇರೆಯಾಗುತ್ತಿತ್ತು. ಆದರೆ ನಾನು ಮೆಚ್ಚಿದ ಹುಡುಗಿ ಗಿರಿಜಾರವರ ಕುಟುಂಬ ಆರ್ಥಿಕವಾಗಿ ಉತ್ತಮವೇನಾಗಿರಲಿಲ್ಲ. ಈ ಎಲ್ಲ ವಿಷಯಗಳನ್ನು ತಿಳಿದಮೇಲೂ ತಂದೆ-ತಾಯಿಗಳು ನನ್ನ ಮದುವೆಗೆ ಒಪ್ಪಿದುದು ಆ ಕಾಲದಲ್ಲಿ ವಿಶೇಷ ಸಂಗತಿಯೇ ಆಗಿತ್ತು. ನಾನು ಮದುವೆಯಾಗುವ ಹುಡುಗಿಯ ವಿಷಯವಾಗಿ ಅವರಿಗೆ ಅಸಮಾಧಾನವಿದ್ದರೂ ಕೂಡ ಅವರು ಒಪ್ಪಿದ್ದಂತೂ ನನಗೆ ಸಂತೋಷವನ್ನುಂಟುಮಾಡಿತು. ತಂದೆಯವರು ನನ್ನ ಮೂಲಕ ಹುಡುಗಿಯ ವಿದ್ಯಾಭ್ಯಾಸ, ಅವಳ ತಂದೆ-ತಾಯಿಗಳ ಬಗ್ಗೆ, ಅವಳ ತಂದೆಯ ಉದ್ಯೋಗದ ಬಗ್ಗೆ, ಎಲ್ಲ ವಿವರಗಳನ್ನು ತಿಳಿದು ನನ್ನ ಮದುವೆಗೆ ಸಮ್ಮತಿಯನ್ನು ಕೊಟ್ಟರು. ಆದರೆ ಅವರು ಹುಡುಗಿಯನ್ನು ಮತ್ತು ಹುಡುಗಿಯ ತಂದೆಯನ್ನು ನೋಡಬಯಸಿದರು. ನನ್ನ ತಂದೆಯ ಈ ಇಚ್ಛೆಯನ್ನು ತಿಳಿಸಿ ಗಿರಿಜಳಿಗೆ ಪತ್ರ ಬರೆದೆ. ಯಾವ ತಾರೀಖಿನಂದು ಸಾಂಗಲಿಗೆ ಬರಲು ಸಾಧ್ಯವಾಗುತ್ತದೆಂದು ತಿಳಿಸಬೇಕೆಂದು ಹೇಳಿದೆ. ನನ್ನ ಸೂಚನೆಯ ಪ್ರಕಾರ ೧೯೬೧ನೆಯ ಇಸವಿಯಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ಗಿರಿಜಾ ಮತ್ತು ಅವಳ ತಂದೆ ಸಾಂಗಲಿಗೆ ಬಂದರು. ನಮ್ಮ ಮನೆಯಲ್ಲಿ ಇದ್ದರು. ವಿವಾಹಕ್ಕೆ ಸಂಬಂಧಿಸಿದ ಸಾಮಾನ್ಯ ಮಾತುಕತೆಗಳು ನಡೆದವು. ನಮ್ಮ ಬೇಡಿಕೆಗಳು ಯಾವುದೂ ಇರಲಿಲ್ಲ. ಹುಡುಗಿ ನನಗೆ ಒಪ್ಪಿಗೆಯಾಗಿದ್ದುದರಿಂದ ಆ ವಿಚಾರದಲ್ಲಿ ತಂದೆ-ತಾಯಿಗಳು ಹೆಚ್ಚಿಗೆ ಏನೂ ಹೇಳುವಂತಿರಲಿಲ್ಲ. ನನ್ನ ತಂದೆಯವರ ಆರ್ಥಿಕ ಪರಿಸ್ಥಿತಿಯೂ ಉತ್ತಮವಾಗಿಲ್ಲದೆ ಇದ್ದುದರಿಂದ ಸಾಂಗಲಿಯಿಂದ ಮದುವೆಗಾಗಿ ಮೈಸೂರಿಗೆ ಹೋಗಿ ಬರುವುದಕ್ಕಾಗಿ ರೈಲುಪ್ರಯಾಣದ ಖರ್ಚನ್ನು ಮಾತ್ರ ನನ್ನ ತಂದೆಯವರು ಕೇಳಿದರು. ಇದಲ್ಲದೆ ಇತರ ಯಾವ ಬೇಡಿಕೆಗಳನ್ನೂ ಮುಂದಿಡಲಿಲ್ಲ. ೧೯೬೧ ಅಕ್ಟೋಬರ್ ೨೮ರಂದು ಮೈಸೂರಿನಲ್ಲಿ ಮದುವೆ ನಡೆಯತಕ್ಕದ್ದೆಂದು ತೀರ್ಮಾನವಾಯಿತು. *(ಮುಂದುವರೆಯುವುದು........)*

ಜನಪದ ಸೇವಾ ಟ್ರಸ್ಟಿನ ಅಂಗಳ



ಈಗ ಟ್ರಸ್ಟಿನ ಆಶ್ರಯದಲ್ಲಿ ೪೦ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ವಯೋಮಿತಿ ಏಳರಿಂದ ಹದಿಮೂರು ಇದೆ. ಈ ಎಲ್ಲ ಮಕ್ಕಳು ಗ್ರಾಮೀಣ ಪ್ರದೇಶದ ಬಡ ಹಾಗೂ ಹಿಂದುಳಿದ ವರ್ಗಗಳಿಂದಲೂ ಮತ್ತು ಸಾಮಾಜಿಕ ಸಮಸ್ಯೆಗೆ ಒಳಗಾಗಿರುವ ಕುಟುಂಬಗಳಿಂದಲೂ ಬಂದಂಥವರಾಗಿದ್ದಾರೆ. ಇವರಲ್ಲಿ ನಾಲ್ಕು ಮಕ್ಕಳು ಅಂಗವಿಕಲರಿದ್ದಾರೆ. ಎಲ್ಲ ಮಕ್ಕಳಿಗೂ ಉಚಿತವಾಗಿ ವಸತಿ ಸೌಕರ್ಯ ಮತ್ತು ಊಟದ ವ್ಯವಸ್ಥೆಯನ್ನು ಮಾಡಲಾಗಿದೆ. ಈ ಮಕ್ಕಳೆಲ್ಲರು ಟ್ರಸ್ಟ್ ನಡೆಸುತ್ತಿರುವ ಜನಪದ ಮುಕ್ತ ವಿದ್ಯಾಲಯದಲ್ಲಿ ಓದುತ್ತಿದ್ದಾರೆ.ಇನ್ನು ಏಳು ವಿದ್ಯಾರ್ಥಿಗಳು ಗ್ರಾಮದ ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಇವರಲ್ಲಿ ಒಂಭತ್ತು ವಿದ್ಯಾರ್ಥಿಗಳಿಗೆ ಮಲಗಲು ಮಂಚದ ವ್ಯವಸ್ಥೆಯನ್ನು ಮಾಡಲಾಗಿದೆ. ಇನ್ನುಳಿದವರಿಗೆ ಮಂಚದ ವ್ಯವಸ್ಥೆ ಮಾಡಬೇಕಿದೆ. ಸುಮಾರು ೨೫ ವರ್ಷಗಳ ಹಿಂದೆ ಟ್ರಸ್ಟಿನಲ್ಲಿ ಸ್ವಯಂ ಸೇವಕನಾಗಿ ಕೆಲಸ ಮಾಡಿದ್ದ ಫ್ರಾನ್ಸ್ ದೇಶದ ಜಾಕಿ ಪರ್ಮನ್ಸೆಯರ್ ಎಂಬುವರು ಟ್ರಸ್ಟಿಗೆ ಭೇಟಿ ಕೊಡಲು ತಮ್ಮ ಹೆಂಡತಿಯೊಂದಿಗೆ ಬಂದಿದ್ದರು. ಮತ್ತು ಟ್ರಸ್ಟಿನಲ್ಲಿ ಒಂದು ವಾರ ಇದ್ದರು. ಅವರು ಸ್ವಯಂ ಸೇವಕರಾಗಿ ಬಂದಿದ್ದಾಗ ಟ್ರಸ್ಟಿನಲ್ಲಿ ಬಹಳಷ್ಟು ಶ್ರಮದಾನದ ಕೆಲಸ ಮಾಡಿದ್ದರು. ಟ್ರಸ್ಟಿನ ಈಗಿನ ಎಲ್ಲ ಬೆಳವಣಿಗೆಗಳನ್ನು ನೋಡಿ ಅವರಿಗೆ ತುಂಬಾ ಸಂತೋಷವಾಯಿತು. ಜಾಕಿಯವರು ಗಾಂಧೀ ವಿಚಾರದಲ್ಲಿ ನಂಬಿಕೆ ಇಟ್ಟಿರುವಂಥ ವ್ಯಕ್ತಿ. ಅವರು ತಮ್ಮ ಇಬ್ಬರು ಗಂಡು ಮಕ್ಕಳಿಗೆ ಬೆಂಜಮಿನ್ ಗಾಂಧಿ, ಜೆರೇಮಿ ವಿನೋಬಾ ಎಂದು ನಾಮಕರಣ ಮಾಡಿದ್ದಾರೆ. ಅವರು ಫ್ರಾನ್ಸ್ ದೇಶದ ಗಾಂಧಿ ಎಂದು ಹೆಸರಾಗಿದ್ದ ಲಾಂಜಾ ಡೆಲವಾಸ್ಟೋರ ಶಿಷ್ಯರು. ಲಾಂಜಾ ಡೆಲವಾಸ್ಟೋರವರಿಗೆ ಭಾರತದಲ್ಲಿ ಶಾಂತಿದಾಸ್ ಎಂದು ಕರೆಯಲಾಗಿತ್ತು. ಟ್ರಸ್ಟಿನ ಪ್ರಯತ್ನದಿಂದಾಗಿ ಹೊಸ ಜೀವನ ದಾರಿ ಕೇಂದ್ರದ ಸಮೀಪದ ಹೊಸಹಳ್ಳಿ ಗ್ರಾಮದಲ್ಲಿ ರಚಿತವಾಗಿರುವ ಗ್ರಾಮ ಅರಣ್ಯ ರಕ್ಷಣಾ ಸಮಿತಿಯ ಆಶ್ರಯದಲ್ಲಿ ಪಕ್ಕದ ಅರಣ್ಯದಲ್ಲಿ ೧೫೦೦೦ ವಿವಿಧ ಬಗೆಯ ಸಸಿಗಳನ್ನು ನೆಡಲಾಗಿದೆ. ಅವೆಲ್ಲವು ಇತ್ತೀಚಿನ ಮಳೆಯಿಂದಾಗಿ ಸದೃಢವಾಗಿ ಬೆಳೆದು ನಿಂತಿವೆ. ಇಂಗ್ಲೆಂಡಿನಿಂದ ಆಲಿಸನ್ ಜೆಜ್ ಎಂಬ ಹುಡುಗಿಯು ಟ್ರಸ್ಟಿನಲ್ಲಿ ಎರಡು ದಿನ ಇದ್ದು ಹೋದಳು. ಪ್ರತಿ ಮಾಹೆಯಂತೆ ಈ ತಿಂಗಳು ಸಹ ಹೋಮಿಯೋಪತಿ ಚಿಕಿತ್ಸಾ ಕೇಂದ್ರವು ನಡೆಯಿತು. ೧೫ ಜನರು ಚಿಕಿತ್ಸೆಯನ್ನು ಪಡೆದುಕೊಂಡರು. ಸಂಪೂರ್ಣ ಕ್ರಾಂತಿ ವಿದ್ಯಾಲಯದ ೭ನೇ ಶಿಬಿರವು ನಡೆಯಿತು. ಈ ಶಿಬಿರದಲ್ಲಿ ಕುವೆಂಪು ವಿಶ್ವ ವಿದ್ಯಾಲಯದ ೨೫ ಶಿಬಿರಾರ್ಥಿನಿಯರು ಭಾಗವಹಿಸಿದ್ದರು. ಶಿಬಿರವು ಯಶಸ್ವಿಯಾಗಿ ನಡೆಯಿತು. ಪ್ರತಿ ವರ್ಷದಂತೆ ಗಣೇಶೋತ್ಸವವನ್ನು ಆಚರಿಸಲಾಯಿತು. ಈ ಉತ್ಸವದಲ್ಲಿ ಭಾಗವಹಿಸಲು ಕರುಣಾಗೃಹದ ಹಳೆಯ ಇಬ್ಬರು ವಿದ್ಯಾರ್ಥಿಗಳು ಬಂದಿದ್ದರು. ಕಳೆದ ೮ ವರ್ಷಗಳಿಂದ ಮೇಲುಕೋಟೆ ಗ್ರಾಮದಲ್ಲಿ ನಡೆಸಲಾಗುತ್ತಿರುವ ಸರ್ವೋದಯ ಪಾತ್ರೆ ಆಂದೋಲನದ ಅಂಗವಾಗಿ ಹದಿಮೂರು ಜನ ಅರ್ಹರಿಗೆ ಧಾನ್ಯವನ್ನು ವಿತರಿಸಲಾಯಿತು. ಅಲ್ಲದೆ "ಸರ್ವೋದಯದ ಪಾತ್ರೆ ಆಂದೋಲನ ವಾರ್ತಾ" ಪತ್ರವನ್ನು ಸಹ ಪ್ರಕಟಿಸಿ ಈ ಆಂದೋಲನದಲ್ಲಿ ಆಸಕ್ತಿ ಇರುವವರಿಗೆಲ್ಲ ಉಚಿತವಾಗಿ ಹಂಚಲಾಯಿತು. ಪಕ್ಕದ ಹೊಸಹಳ್ಳಿ ಗ್ರಾಮದಲ್ಲಿ ಇತ್ತೀಚಿಗೆ ನಡೆದ ಶ್ರಾವಣ ಮಾಸದ ಕೊನೆ ಮಂಗಳವಾರದ ಉತ್ಸವದಲ್ಲಿ ಅರಣ್ಯ ರಕ್ಷಣೆಯ ಸಂಬಂಧವಾಗಿ ಕೆಲಸ ಮಾಡಿದ ಸಂತೋಷ ಕೌಲಗಿಯವರನ್ನು ಬೇಬಿ ಮಠದ ಸ್ವಾಮಿಗಳು ಸನ್ಮಾನಿಸಿದರು. ಅಮೇರಿಕಾದ ಅಯೊವಾ ವಿಶ್ವ ವಿದ್ಯಾಲಯದ ಮೈಸೂರು ಶಾಖೆಯಲ್ಲಿಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತಾನಾಡಲು ಸಂತೋಷ್ ಕೌಲಗಿಯವರು ಆಹ್ವಾನಿತರಾಗಿದ್ದರು. ಬೆಂಗಳೂರಿನಲ್ಲಿಯ ಮಾರ್ಗದರ್ಶಿ ಸಂಸ್ಥೆಯ ಸುರೇಶ್ ಎಂಬುವವರು ಟ್ರಸ್ಟಿಗೆ ಭೇಟಿ ಕೊಟ್ಟು ಉತ್ತಮ ಗುಣಮಟ್ಟದ ಗಾಲಿ ಕುರ್ಚಿಯನ್ನು ದಾನವಾಗಿ ಕೊಟ್ಟರು. "ಅದನ್ನು ಮೈಸೂರಿನ ಜೆ, ಎಸ್.ಎಸ್ ಅಂಗವಿಕಲರ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿರುವ ಕರುಣಾಗೃಹದ ಹಳೆಯ ವಿದ್ಯಾರ್ಥಿನಿ ಪ್ರೀತಿಯ ಉಪಯೋಗಕ್ಕಾಗಿ ಕೊಡಲಾಯಿತು.

(ಇದು೨೦೦೫ ಸೆಪ್ಟೆಂಬರ್ ಮಾಹೆಗೆ ಸಂಬಂಧಿಸಿದ ಟ್ರಸ್ಟಿನಲ್ಲಿಯಮಾಹಿತಿ)

ಸಂತಾಪ

ಕರ್ನಾಟಕ ಜಾನಪದ ಸಂಸ್ಕೃತಿಯನ್ನು ಪುನಶ್ಚೇತನಗೊಳಿಸುವುದರ ಮೂಲಕ ಮತ್ತು ಜಾನಪದ ಸಾಹಿತ್ಯವನ್ನು ಜನಪ್ರಿಯಗೊಳಿಸುವುದರ ಮೂಲಕ ಜಾನಪದ ಬಗ್ಗೆ ಅವಜ್ಞತೆ ಹೊಂದಿದ್ದವರಲ್ಲಿ ಸುಪ್ರಜ್ಞತೆ ಮೂಡಿಸಿದ್ದ ಜಾನಪದ ಲೋಕದ ಅದ್ವಿತೀಯ ಪುರುಷ ಡಾ॥ ಎಚ್.ಎಲ್. ನಾಗೇಗೌಡರು ದಿನಾಂಕ ೨೨-೦೯-೨೦೦೫ರಂದು ತಮ್ಮ ೯೦ನೇ ವಯಸ್ಸಿನಲ್ಲಿ ನಿಧನರಾದುದಕ್ಕೆ ಜನಪದ ವಿಚಾರ ತನ್ನ ಆತ್ಮೀಯ ಸಂತಾಪವನ್ನು ವ್ಯಕ್ತಪಡಿಸುತ್ತದೆ.

ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ಡಾ॥ ಡಿ.ಎಂ. ನಂಜುಂಡಪ್ಪನವರಿಗೆ ಜನಪದ ವಿಚಾರದ ಆತ್ಮೀಯ ಶ್ರದ್ಧಾಂಜಲಿ.

ವಾಚಕ ಮಿತ್ರರಲ್ಲಿ ವಿನಂತಿ.

ಜನಪದ ವಿಚಾರ ಪ್ರಸ್ತುತ ವಿಷಯಗಳಿಗೆ ಸಂಬಂದಿಸಿದಂತೆ ಲೇಖನಗಳನ್ನು ಆಹ್ವಾನಿಸುತ್ತದೆ. ಆಸಕ್ತರು ಪತ್ರಿಕೆಯನ್ನು ಸಂಪರ್ಕಿಸಬೇಕಾಗಿ ವಿನಂತಿ.

ತಾವು ದಯಮಾಡಿ ಜನಪದ ವಿಚಾರದ ವಾರ್ಷಿಕ ಚಂದಾ 100/- ರೂ. ಮನಿಆರ್ಡರ್ ಮೂಲಕ ಕಳುಹಿಸಿ ಪತ್ರಿಕೆಯ ಬೆಳವಣಿಗೆಗೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

-ಪ್ರಕಾಶಕರು



ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(-ಸಂಪಾದಕರು)*

KA-SKMND-470-2003-05
Regd. no. KAR/KAN/2000/3820

ತೆರೆದ-ಅಂಚೆ

TO,

jANAPADA VICHARA **-** Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ®. Melkote. Dist- mandya – 571431
Phone : 08236 – 298754 e-mail : janapada@yahoo.com